ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 18, ಸ್ಯ 1904.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ–ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಕಾದ ಇನ್ಸ್ತಿಹಾರ್ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಟಿಂಡೆಂಟರು, ಕ್ಯಟ್ರೋಲರವರು, ಪಬ್ಲಿಕ್ವರ್ಕ್ಸ ಆಫಿಸರ್ಗಳು, ಫಾರೆಸ್ಟು, ರೆಜಿಸ್ಟ್ರೇರ್ಷ ವ ಎಜ್ಯುಕೇರ್ಷ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆರ್ಷ ಜಡ್ಜ್ಗಿರು, ಡಿಸ್ಟ್ರಿಕ್ಟು ಡೆಪ್ಯುಟಿ-ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್ಗಿರು, ಪೋಲೀಸ್ ಸೂಪರ್ಟಿಂಡೆಂಟರು, ಫಾರೆಸ್ಟು ಆಫಿಸರ್ಗಳು ಇವರುಗಳಿಂದ ಕೊಡೋಕಾದ ಇನ್ಸ್ತಿಹಾರ್ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಪಾಫೀಸ್ ನೋಟೀಸ್ಗಳು.

3ನೆ ಭಾಗ–ಲೆಜಿಸ್ಲೇಟಿವ್ ರೆಗ್ಯುಲೇರ್ಷಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ–ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಕಾದ ಇನ್ಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 26—27ನೆ ಜುಲೈ 1904.

ನಂ. 668—34-2—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮತ್ತು ಂ 9383–ಮಿ. ಫೈ. 21—96ನೆ ಮತ್ತು 9384–ಮಿ. ಫೈ. 21—96ನೆ ನಂಬರ್ ಇನ್ಸ್ತಿಹಾರ್ನಾಮೆಗಳಿಂದನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ರಾಮನಹಳ್ಳಿ	... ಚಿಕ್ಕಮಗಳೂರು	5. ಬಿಸಲೆಹಳ್ಳಿ ..	... ಕಡೂರು.
2. ಹೊಸೂರು	... ಹಳ್ಳಿಕೆರೆ	6. ಹೊಸಹಳ್ಳಿ ..	ಡಿಟೋ
3. ಕೋಡಿಹಳ್ಳಿ	.... ಡಿಟೋ	7. ಹಳ್ಳಕಟ್ಟೆನಾಯ್ಕನಹಳ್ಳಿ ..	ಡಿಟೋ
4. ಹಿರಿಕತ್ತೂರು	... ಡಿಟೋ		

ತಾರೀಖು 26—27ನೆ ಜುಲೈ 1904.

ನಂ. 670—30-2-ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯ್ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿರ ಪ್ರದೇಶಗಳಾಗಿ ಆಗಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ಇದರಿಂದ ಕಂಡ ಸ್ಥಳಗಳು ಎರಡು ತಿಂಗಳುಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ಶಿವಮೊಗ್ಗಾ ಡಿಸ್ಟ್ರಿಕ್ಟ್.

ನಂ.	ತಾಲ್ಲೂಕು.	ಸ್ಥಳ.
1.	ಶಿವಮೊಗ್ಗ	ಶಿವಮೊಗ್ಗ ಟವ್ನ್
2.	ಡಿಟೋ	ಮಂಡ್ತಿ
3.	ಡಿಟೋ ..	ಮಾಯಿದೊಳಲ್
4.	ಡಿಟೋ ..	ಹೊಳೆಹೊನ್ನೂರು
5.	ಡಿಟೋ ..	ಮತ್ತೂರು
6.	ಡಿಟೋ	ಹೊಸಹಳ್ಳಿ
7.	ಡಿಟೋ ..	ಹೊಳಲೂರು
8.	ಡಿಟೋ	ಹರಿಗಿ
9.	ಡಿಟೋ ...	ಉರಗದೂರು
10.	ಡಿಟೋ	ನಿಡಿಗಿ
11.	ಡಿಟೋ ..	ಸ್ವೆದರಕ್ಕಲಹಳ್ಳಿ
12.	ಡಿಟೋ .	ಹರಕೆರೆ
13.	ಡಿಟೋ	ವಂಗೋಟಿ
14.	ಡಿಟೋ ...	ಯಡೆಹಳ್ಳಿ
15.	ಡಿಟೋ ...	ಕೂಡ್ಲಿ
16.	ಡಿಟೋ ...	ಕಲ್ಲಿಕಾಳು
17.	ಡಿಟೋ ..	ಹೊಳೆಬನವಳ್ಳಿ
18.	ಡಿಟೋ ..	ಇಟ್ಟಿಗೆಹಳ್ಳಿ
19.	ಡಿಟೋ .	ನವಲೆ
20.	ಡಿಟೋ ...	ಸಂತೆಕಡೂರು
21.	ಕುಂಸಿ ..	ಅಯನೂರು
22.	ಸೊರಬ ..	ಕುನ್ನೆತಪ್ಪ
23.	ಡಿಟೋ ..	ಬಂಗೂರು
24.	ಡಿಟೋ ..	ಪುರ
25.	ಶಿಕಾರಿಪುರ ..	ಕೊರಟಗೆರೆ
26.	ಹೊನ್ನಾಳಿ ..	ಕುಂಬಳನೇಲೆ
27.	ಡಿಟೋ ...	ಕೂಳಂಬಿ
28.	ಡಿಟೋ ..	ನಿರಲಗುಂಡಿ
29.	ಡಿಟೋ ..	ಸುರಹೊನ್ನೆ
30.	ಡಿಟೋ ..	ಹೊಸಹಳ್ಳಿ
31.	ಡಿಟೋ ...	ಹುಣಸಗಟ್ಟ
32.	ಚನ್ನಗಿರಿ ...	ಬೆರದೊಣ
33.	ಡಿಟೋ ..	ಕಟ್ಟಲಗೆರೆ
34.	ಡಿಟೋ ..	ಬಿಗ್ಗೇನಹಳ್ಳಿ
35.	ಡಿಟೋ	ಮುದ್ದೇನಹಳ್ಳಿ
36.	ಡಿಟೋ ...	ಇಟ್ಟಿಗಿ
37.	ಡಿಟೋ ...	ಕರಿಗನೂರು
38.	ಡಿಟೋ ..	ಅಲೂರು
39.	ಡಿಟೋ ..	ಕರೆಕಟ್ಟೆ
40.	ಡಿಟೋ ..	ಮಲ್ಲಾಪುರ
41.	ಡಿಟೋ ...	ಲಿಂಗದಹಳ್ಳಿ
42.	ಡಿಟೋ ...	ಚಿಕ್ಕಕೋಗಲೂರು
43.	ಡಿಟೋ ..	ಮಾಂಡವಗೆರೆ
44	ಡಿಟೋ ..	ಅಸ್ತಪ್ಪನಹಳ್ಳಿ
45.	ಡಿಟೋ ...	ಸೋಮಲಾಪುರ
46.	ಡಿಟೋ ..	ಚಿಕ್ಕಗಂಗೂರು
47.	ಸಾಗರ ...	ಸಾಗರ

ತಾರೀಖು 26—27ನೆ ಜುಲೈ 1904.

ನಂ. 672—35-2—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯ್ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಚಿಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಇಲಕೆರೆ ..	ಹೊಳಲಕೆರೆ.	3. ಹಾಲಿಕೆರೆ	... ಹೊಳಲಕೆರೆ.
2. ಪಾಪೇನಹಳ್ಳಿ ..	ಡಿಟೋ	4. ಹಬ್ಬಾಳ	... ದಾವಣಗೆರೆ.

ತಾರೀಖು 29ನೆ ಜುಲೈ 1904.

ನಂ. 762—17—6—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯ್ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಚಿಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳವು ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.
ಬೈಚನಹಳ್ಳಿ	ಗುಬ್ಬಿ.

ತಾರೀಖು 4—5ನೆ ಆಗಸ್ಟ್ 1904.

ನಂ. 999—31 4—ಸ್ಯಾನಿಟೇರ್ಯ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯ್ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಚಿಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಬಂಗಳೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಸೋಂಪುರ	... ಆನೇಕಲ್.	5. ಕನ್ನಮಂಗಲ	.. ಹೊಸಕೋಟಿ.
2. ಜಿಗಣಿ	... ಡಿಟೋ	6. ಹಿಂಡಿಗನಾಳ	.. ಡಿಟೋ
3. ಬೆಳಕೆರೆ	... ಚನ್ನಪಟ್ಟಣ.	7. ಜೋಡಿ ಮೇದಹಳ್ಳಿ	.. ದೊಡ್ಡಬಳ್ಳಾಪುರ
4. ಹೊಸಕೋಟಿ	... ಹೊಸಕೋಟಿ.	8. ದೊಂಬರಹಳ್ಳಿ	.. ಡಿಟೋ

ತಾರೀಖು 4-5ನೆ ಆಗಸ್ಟು 1904.

ನಂ. 1013—34-4—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿರಬಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ಇದರಿಂದ ಕಂಡ ಸ್ಥಳಗಳು ಎರಡು ತಿಂಗಳುಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಕಡೂರು ಡಿಸ್ಟ್ರಿಕ್ಟು.

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ಕುಲಾರದಹಳ್ಳಿ	...	ಚಿಕ್ಕಮಗಳೂರು.	11.	ಬೀರೂರು	...	ಕಡೂರು.
2.	ಕಟ್ಟಿತಿಮ್ಮನಹಳ್ಳಿ	...	ಡಿಟೋ	12.	ಸಕ್ಕರಪಟ್ಟಣ	..	ಡಿಟೋ
3.	ಕಳಸಾಪುರ	...	ಡಿಟೋ	13.	ಸರಸ್ವತಿಪುರ		ಡಿಟೋ
4.	ಮೂರ್ತಿಕೆರೆ	..	ಡಿಟೋ	14.	ಯಗತಿ	...	ಡಿಟೋ
5.	ಅತ್ತಿಗನಾಳು	...	ತರೀಕೆರೆ.	15.	ಯಲ್ಲಂಬಲಸೆ	...	ಡಿಟೋ
6.	ರಿಗ್ಗಾಪುರ	...	ಡಿಟೋ	16.	ಕೋಡಿಹಳ್ಳಿ	..	ಡಿಟೋ
7.	ಲಿಂಗದಹಳ್ಳಿ	..	ಡಿಟೋ	17.	ಚನ್ನಾಪುರ	...	ಡಿಟೋ
8.	ಯರದಹಂಕಲು	..	ಡಿಟೋ	18.	ಬೀರಮಾನಹಳ್ಳಿ	...	ಎಡಹಳ್ಳಿ ಸಬ್ ತಾ॥
9.	ಅತ್ತಿಮೊಗೆ	..	ಡಿಟೋ	19.	ಎತಹಳ್ಳಿ	..	ಡಿಟೋ
10.	ಮುಂದಿ	..	ಡಿಟೋ				

ತಾರೀಖು 12—13ನೆ ಆಗಸ್ಟು 1904.

ನಂ. 1328—35-4—ಸ್ಯಾ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ, ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಯೆ ಅಂಟುರೋಗ ತಗಲಿದ ಪ್ರದೇಶಗಳೆಂದು ಪ್ರಸಿದ್ಧಪಡಿಸಲ್ಪಟ್ಟಿದ್ದ ಇದರಿಂದ ಕಂಡ ಸ್ಥಳಗಳು ಎರಡು ತಿಂಗಳಿಗೆ ಮೇಲ್ಪಟ್ಟು ರೋಗ ವಿಲ್ಲದೆ ಇರುವದರಿಂದ ಅಂತಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಚಿತ್ರದುರ್ಗ ಡಿಸ್ಟ್ರಿಕ್ಟು.

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ನಾಯಕನಹಟ್ಟಿ	..	ಚಳ್ಳಕೆರೆ.	8.	ಲೋಕಿಕೆರೆ	..	ದಾವಣಗೆರೆ.
2.	ಜಗನೂರಹಟ್ಟಿ	...	ಡಿಟೋ	9.	ಸಡದಿ	..	ಡಿಟೋ
3.	ಕಾಮುಂದಲಗುಂಡಿ	..	ಜಗಲೂರು.	10.	ಕಾಡಜ್ಜಿ	..	ಡಿಟೋ
4.	ಚಿಕ್ಕಮಲ್ಲನಹೊಳೆ	..	ಡಿಟೋ	11.	ಮಲೆಬೆನ್ನೂರು	..	ಡಿಟೋ
5.	ಕುರುಬರಹಟ್ಟಿ	..	ಚಿತ್ರದುರ್ಗ.	12.	ಹರಲಹಳ್ಳಿ	..	ಡಿಟೋ
6.	ಕಂದಗಾಲ	..	ದಾವಣಗೆರೆ.	13.	ಕೂನಗಾಲಿ	..	ಹೊಳಲಕೆರೆ.
7.	ಗೋಣಿವಾಡ	..	ಡಿಟೋ				

ತಾರೀಖು 13ನೆ ಆಗಸ್ಟು 1904.

ನಂ. 1310—22-6—ಸ್ಯಾ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸುವದೇನಂದರೆ, ಇದರಿಂದ ಕಂಡ ಜಾತ್ರೆಯ ಉತ್ಸವಗಳಿಗೆ ಅಂಟು ರೋಗ ತಗಲಿದ ಪ್ರದೇಶಗಳಿಂದ ಅಂದರೆ, ಕೊಯಿಮುತ್ತೂರು, ಸೇಲಂ, ಬಳ್ಳಾರಿ, ಅನಂತಪುರ, ಕಡಪ, ದಕ್ಷಿಣ ಕನ್ನಡ, ಮತ್ತು ನೀಲಗಿರಿ ಡಿಸ್ಟ್ರಿಕ್ಟುಗಳು; ಮೈಸೂರು ಸಂಸ್ಥಾನ, ಬೊಂಬಾಯಿ ಅಧಿಪತ್ಯ, ಬಂಗಾಳ, ಪಂಜಾಬು, ರಾಜಪುತ್ರಾನ್ಥಾನ, ಆಗ್ರ ವ ಅಯೋಧ್ಯಾ ಸಂಯುಕ್ತ ಪ್ರಾಂತ್ಯಗಳು ಮತ್ತು ಹೈದರಾಬಾದ್ ಸಂಸ್ಥಾನ ಈ ಪ್ರದೇಶಗಳಿಂದ ಬರುವ ಜನಗಳನ್ನು ಮದರಾಸ್ ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಆಧಾರಿಟಿ.
				ಯಾವ ಲಾಗಾಯ್ತು.	ಯಾವ ವರಿವಿಗೆ.	
ಬ್ರಹ್ಮೋತ್ಸವ	ತಿರುಪತಿ ಸನಿವಾಪ ತಿರುಮಲೆ		ಉತ್ತರ ಆರ್ಕಾಟು	6—9—04	20—9—04	1904ನೆ ಆಗಸ್ಟು 6ನೆ ಮಾರ್ಕಂ 1016 ಜಿ. ನೆ ನಂಬರ್ ಮೊದಲನೇ ಅಸಿಸ್ಟೆಂಟ್ ರೆಸಿಡೆಂಟರವರ ಎಡ್ವರ್ಸ್‌ಮೆಂಟ್.

ತಾರೀಖು 3ನೆ ಆಗಸ್ಟು 1904.

ನಂ. 924—42-4—ಸ್ಯಾನಿಟೇರ್ಸ, ಸನ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನಿನ 2ನೆ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮಂತ ಮಹಾರಾಜಾ ಸರ್ವಾರದವರು, 1898ನೆ ಫೆಬ್ರುವರಿ 10ನೆ ಮಾರ್ಕಂ 9384—ಮಿ. ಸ್ಪೆ. 21—96ನೆ ನಂಬರು ಇಸ್ತಿಹಾರ್ನಾಮೆಯೊಡನೆ ಕೊಡಲ್ಪಟ್ಟ ರೆಗ್ಯುಲೇಷನ್ಸುಗಳ ನಿಯಮಗಳಲ್ಲಿ ವಿಧಿಸಿರುವ ಅಜ್ಞಾನುಯಿಷ್ಠ ಪದ್ಧತಿಯನ್ನು ಮೈಸೂರು ಷಹರಿನಲ್ಲಿ 1904ನೆ ಆಗಸ್ಟು 10ನೆ ತಾರೀಖಿನಾರಭ್ಯ ಜಾರೀಲಿ ತರತಕ್ಕದ್ದೆಂದು ಆಜ್ಞೆ ಕೊಡುತ್ತಾರೆ.

2. ಸದರೀ ತಾರೀಖಿನಾರಭ್ಯ ಮೈಸೂರು ಷಹರಿನಲ್ಲಿರುವ ರೈಲ್ವೆ ಸ್ಟೇಷನ್ನು ಅಜವಣಿಯನ್ನು ಸ್ಟೇಷನ್ನಾಗಿ ತರತಕ್ಕದ್ದೆಂದು ಪ್ರಸಿದ್ಧ ಪಡಿಸಲ್ಪಟ್ಟಿರುತ್ತೆ.

299

ನಂ. ಆರ್. 4318, 1904ನೆಯ ಜೂನ್ 30—ಜುಲೈ 11ನೆಯ ತಾರೀಖು.

ಶೇಕದಾರಿ ಉದ್ಯೋಗವನ್ನು ಉನ್ನತ ಸ್ಥಿತಿಗೆ ತರುವುದಕ್ಕೋಸ್ಕರ ಲೆಫ್ಟಿನೆಂಟ್ ಕರ್ನಲ್ ಮಹಾರಾಜರವರ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟಿರುವ ಕೆಳಗಿನ ಏರ್ಪಾಡು ಸರ್ವ ಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿದೆ:—

(1) 1904ನೆಯ ಜುಲೈ 1ನೆಯ ತಾರೀಖಿನಿಂದ, ಶೇಕದಾರರ ಸಂಬಳವು 1ನೆಯ ತರಗತಿಗೆ 35 ರೂಪಾಯಿ, 2ನೆಯ ತರಗತಿಗೆ 30 ರೂಪಾಯಿ, 3ನೆಯ ತರಗತಿಗೆ 25 ರೂಪಾಯಿ, ಆಗಿರತಕ್ಕದ್ದು.

(2) ಶೇಕದಾರರ ಸಂಖ್ಯೆಯು 374 ಆಗಿರತಕ್ಕದ್ದು, ಮತ್ತು ಪ್ರತಿ ತರಗತಿಯಲ್ಲಿಯೂ ಅವರ ಸಂಖ್ಯೆಯು ಈ ಕೆಳಗಿನ ಪರಿಮಾಣಕ್ಕೆ ವಿುರಿರತಕ್ಕದ್ದಲ್ಲ:—

ಒಟ್ಟು ಸಂಖ್ಯೆಯಲ್ಲಿ ಸೇಕಡಾ 20ರಷ್ಟು 1ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 35 ರೂಪಾಯಿನಂತೆ 75, ಒಟ್ಟು ಸಂಖೆಯಲ್ಲಿ ಸೇಕಡಾ 40ರಷ್ಟು 2ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 30 ರೂಪಾಯಿನಂತೆ 142, ಒಟ್ಟು ಸಂಖ್ಯೆಯಲ್ಲಿ ಸೇಕಡಾ 50ರಷ್ಟು 3ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 25 ರೂಪಾಯಿನಂತೆ 187.

(3) ಶೇಕದಾರರಲ್ಲಿ ಪ್ರತಿ ಒಬ್ಬನಿಗೆ ಮೂಹೆಯಾನ 10 ರೂಪಾಯಿನಂತೆ ಕುದರೆಯ ಭತ್ಯವು ಸಲ್ಲುವುದು, ಮತ್ತು ಮಲೆನಾಡು ಭತ್ಯವೆ ಈಗ ಸಲ್ಲುತ್ತಾ ಇರುವ ಕಡೆಯಲ್ಲೆಲ್ಲಾ ಈಗಿನಂತೆ ಮುಂದೆಯೂ ಸಲ್ಲುವದು.

(4) ಪ್ರತಿ ಶೇಕದಾರನು ಒಂದು ಸರಿಯಾದ ಸವಾರಿ ಕುದರೆ ತಟ್ಟುವನ್ನು ಇಡತಕ್ಕದ್ದು. ಮತ್ತು ತನ್ನ ಹೋಬಳಿಯಲ್ಲಿ ಸಂಚಾರ ಮಾಡುವದರಲ್ಲಿ ಪ್ರತಿ ತಿಂಗಳಲ್ಲಿಯೂ ಕನಿಷ್ಟಪಕ್ಷ 20 ದಿನಗಳಿಗೆ ಕಡಿಮೆ ಇಲ್ಲದೆ ಕಳೆಯಬೇಕು.

(5) ಈ ಉದ್ಯೋಗಕ್ಕೆ ಸೇರಿಸಿಕೊಳ್ಳುವುದಕ್ಕೆ ಈ ಕೆಳಗಿನ ಯೋಗ್ಯತೆಗಳು ಇರತಕ್ಕದ್ದು:—

(i) ಉಮೇದವಾರನು ಮೆಟ್ರಿಕ್ಯುಲೇಷನಿಗೆ ಕಡಮೆ ಇಲ್ಲದ ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು ಮತ್ತು ಈಗ ಉದ್ಯೋಗದಲ್ಲಿ ಇಲ್ಲದ ಮನುಷ್ಯರ ವಿಷಯದಲ್ಲಿ, ಅವರು 25 ವರ್ಷ ವಯಸ್ಸಿಗೆ ವಿುರಿದವರಾಗಿರಕೂಡದು;

(ii) ಡಿಸ್ಟ್ರಿಕ್ಟ್ ಮೆಡಿಕಲ್ (ವೈದ್ಯ) ಆಫಿಸರಿಗೆ ಕಡಮೆ ಇಲ್ಲದ ಹುದ್ದೆಯ ಮೆಡಿಕಲ್ ಆಫಿಸರಿಂದ ಕಾಯತಃ ಅರ್ಜನಾಗಿದಾನೆಂದು ದೃಢೀಕರಿಸಲ್ಪಡಬೇಕು.

(6) ಉಮೇದವಾರರು ಈ ಕೆಳಗಿನ ವಿಷಯಗಳಲ್ಲಿ ಶೇಕದಾರಿ ಪರೀಕ್ಷೆ ಎಂದು ಕರೆಯಲ್ಪಡುವ ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು:—

(ಎ) 1900ನೆಯ ನವಂಬರ್ 6ನೆಯ ತಾರೀಖಿನ ನಂ. 3766—ಆರ್. ಎಫ್. 108-92ನೆಯ ಗವರ್ನಮೆಂಟ್ ಇಸ್ತಿಹ್ನಾರ್ನೆಯಲ್ಲಿ ವಿಧಿಸಲ್ಪಟ್ಟಿರುವ ವಿಷಯಗಳು ಅವು ಯಾವನೆಂದರೆ—ಲ್ಯಾಂಡ್ ರೆವಿನ್ಯು ಕೋಡ್, ಅದಕ್ಕನುಸಾರವಾದ ನಿಬಂಧನೆಗಳು, ಮತ್ತು (ಹೊಸ) ರೆವಿನ್ಯು ಮಾನ್ಯುಯಲ್ ಎಂಬ ಪುಸ್ತಕದಲ್ಲಿ ಗೊತ್ತು ಮಾಡಲ್ಪಡುವ ಭಾಗಗಳು, ಮತ್ತು ಸರ್ವೆ ಮಾನ್ಯುಯಲ್ ಪುಸ್ತಕ, ಅಥವಾ ಆಗಿಂದಾಗ್ಗೆ ಪ್ರಕಟಿಸಲ್ಪಡುವ ಗವರ್ನಮೆಂಟಿನವರ ಕಾಶ್ವತವಾದ ಹುಕುಂಗಳ ಸಂಗ್ರಹದ ಇತರ ಯಾವದಾದರೂ ಒಂದು ಪುಸ್ತಕ.

(ಬಿ) ಸುಲಭವಾಗಿ ಕನ್ನಡವನ್ನು ಓದುವುದಕ್ಕು ಬರೆಯುವುದಕ್ಕೂ ಸಾಮರ್ಥ್ಯ.

(ಸಿ) ಹೋಬಳಿಗಳನ್ನು ಅಳೆದುವುದಕ್ಕು ಮತ್ತು ಅವುಗಳ ನಕ್ಷೆ ಬರೆಯುವುದಕ್ಕೂ ಸಾಮರ್ಥ್ಯ.

(ಡಿ) ಕಟ್ಟಡಗಳಿಗೂ ನೀರಾವರಿಗೂ ಸಂಬಂಧಪಟ್ಟ ಸಣ್ಣ ಕೆಲಸಗಳಿಗೆ ಅಂದಾಜು ತಯಾರ್ಮಾಡುವುದಕ್ಕೂ ಕೆಲಸ ನಡೆಸುವುದಕ್ಕೂ ಸಾಮರ್ಥ್ಯ.

(ಇ) ಸವಾರಿ ಮಾಡುವುದಕ್ಕೆ ಸಾಮರ್ಥ್ಯ.

ಲೋಕಲ್ ಸರ್ವಿಸ್ (ಸ್ಥಳೀಯ ಉದ್ಯೋಗದ) ಪರೀಕ್ಷೆಯಲ್ಲಿ ಈ ಶೇಕದಾರಿ ಪರೀಕ್ಷೆಯು ಒಂದು ಶಾಖೆಯಾಗಿರತಕ್ಕದ್ದು.

(7) ಮೇಲ್ಕಂಡಂತೆ ಯೋಗ್ಯತೆಯನ್ನು ಹೊಂದುವ ಉಮೇದವಾರರು ಶೇಕದಾರಿಯ ಸ್ಥಾನಕ್ಕೆ ಅರ್ಹರಾಗಿರತಕ್ಕದ್ದು. ಖಾಲಿ ಬಿದ್ದಾಗ ಕಡೆಯ ತರಗತಿಗೆ ಸಾಮಾನ್ಯವಾಗಿ ಮೊದಲು ನೇಮಕ ಮಾಡಲ್ಪಡತಕ್ಕದ್ದು.

(8) ಹಾಗೆ ನೇಮಕ ಮಾಡಲ್ಪಟ್ಟ ಮನುಷ್ಯನು ನಿಜವಾಗಿ ಕೆಲಸದ ಮೇಲೆ ಇಡಲ್ಪಡುವುದಕ್ಕೆ ಮುಂಚೆ ಕಾರ್ಯತಃ ಸರ್ವೆಯಲ್ಲಿ ತಯಾರ್ಮಾಡಲ್ಪಡುವುದು ಅವಶ್ಯವಾಗಿರುವುದರಿಂದ ಈ ಕೆಳಗಿನ ಬೋಧನ ಕ್ರಮವು ವಿಧಿಸಲ್ಪಟ್ಟಿದೆ:—

(1) ಹೊರಗೆ ಹೋಗಿ ಕೆಲಸ ಮಾಡುವ ಬಂದು ಕಾಲದ ವರೆಗೂ ಎಂದರೆ 8 ತಿಂಗಳು ಅಥವಾ ವಿಶೇಷ ಸಂದರ್ಭಗಳಲ್ಲಿ ಇನ್ನೂ ಕಡಮೆಯ ಕಾಲದ ವರೆಗೆ ಕಾರ್ಯತಃ ಬೋಧನವನ್ನು ಹೊಂದುವುದಕ್ಕಾಗಿ ಬಂದು ಅಳೆಯುವ ಸಿಬ್ಬಂದಿಗೆ ಅವನು ಲಗತ್ತುಮಾಡಲ್ಪಟ್ಟು ಇರುವನು.

(2) ಸಾಧಾರಣವಾದ ಸರಪಣಿ ಅಳತೆಯನ್ನೂ ಕ್ರಾಸ್ ಸ್ಟ್ಯಾಫ್ ಅಳತೆಯನ್ನು ಮಾಡುವುದಕ್ಕೆ ಯೋಗ್ಯತೆ ಉಳ್ಳವನಾಗಿ ಇದಾನೆಂದು ಮತ್ತು ಅಳತೆಯ ನಿಬಂಧನೆಗಳನ್ನು ತಿಳಿದುಕೊಂಡು ಇದಾನೆಂದೂ ಅವನು ಲಗತ್ತಾಗಿ ಇರುವ ಅಳತೆಯ ಸಿಬ್ಬಂದಿಯ ಅಧಿಕಾರದಲ್ಲಿ ಇರುವ ಆಫಿಸರಿಂದ ಬಂದು ಯೋಗ್ಯತಾ-ಪತ್ರಿಕೆಯ (ಸರ್ಟಿಫಿಕೇಟು) ನ್ನು ಅವನ ಯೋಗ್ಯತೆಯ ನಿದರ್ಶನಕ್ಕಾಗಿ ಹೊಂದತಕ್ಕದ್ದು.

(3) ಬಹಳ ವಿಶೇಷ ಸಂದರ್ಭಗಳಲ್ಲಿ, ಉಮೇದವಾರನು ಅರ್ಜನಾಗಿ ಇದ್ದರೆ, 4 ತಿಂಗಳುಗಳಿಗೆ ಕಡಿಮೇ ಇಲ್ಲದಷ್ಟು ಕಾಲ ಅವನು ವಿದ್ಯಾಭ್ಯಾಸ ಮಾಡಿದಮೇಲೆ ಆಫಿಸರುಗಳು ಅವನಿಗೆ ಬಂದು ಸರ್ಟಿಫಿಕೇಟನ್ನು ಕೊಡಬಹುದು.

(4) ಅಳತೆಯ ಶಿಬ್ಬಂದಿಗಳಲ್ಲಿ ಶೇರಿಸಿಕೊಳ್ಳುವದಕ್ಕಾಗದಷ್ಟು ವಿದ್ಯಾಭ್ಯಾಸ ಮಾಡತಕ್ಕ ಶೇಕದಾರ್ರ ಸಂಖೆಯು ಹೆಚ್ಚಾಗಿರುವಾಗ, ಅವರಲ್ಲಿ ಕೆಲವರನ್ನು ಡಿಸ್ಟ್ರಿಕ್ಟ್ ಸರ್ವೆಯರ್‌ಗಳ ಜೊತೆಗೆ ಶೇರಿಸಬಹುದು, ಅವರೂಕೂಡ ಅಳತೆಯ ಶಿಬ್ಬಂದಿಗಳ ಅಧಿಕಾರದಲ್ಲಿ ಇರುವ ಆಫಿಸರುಗಳಂತೆ ಸರ್ಟಿಫಿಕೇಟುಗಳನ್ನು ಕೊಡಬಹುದು, ಅಂತಹ ಸರ್ಟಿಫಿಕೇಟುಗಳನ್ನು ಅಂಗೀಕರಿಸಬಹುದು.

(9) ಮೂರನೆಯ ತರಗತಿಯಿಂದ ಎರಡನೆಯ ತರಗತಿಗೂ ಎರಡನೆಯ ತರಗತಿಯಿಂದ ಮೊದಲ ತರಗತಿಗೂ ಇಜಾಫೆಯು ಕೆಳಗಿನಂತೆ ಕ್ರಮಪಡಿಸಲ್ಪಡುವುದು :—

(i) ಪ್ರತಿ ತರಗತಿಯಲ್ಲಿಯೂ ಉತ್ತಮ ಸಂಖ್ಯೆಯ ಖಾಲಿಗಳು ಭರ್ತಿ ಆಗುವ ವರೆಗೂ ಮೇಲ್ತಂಡಂತೆ ಯೋಗ್ಯತೆಯನ್ನು ಹೊಂದಿದ ಶೇಕದಾರನು ಬಂದು ತರಗತಿಯಲ್ಲಿ ಎರಡು ವರ್ಷಗಳು ಸಮರ್ಥನಾಗಿ ಕೆಲಸ ಮಾಡಿದ ತರುವಾಯ ಮೇಲಿನ ತರಗತಿಗೆ ಇಜಾಫೆಗೆ ಹಕ್ಕುಳ್ಳವನಾಗಿ ಇರುವನು ;

(ii) ಮೊದಲು ಎರಡನೆ ತರಗತಿಗಳಲ್ಲಿ ಉತ್ತಮ ಸಂಖ್ಯೆಯ ಖಾಲಿಗಳು ಈ ಪ್ರಕಾರ ಭರ್ತಿ ಮಾಡಲ್ಪಟ್ಟಾಗ ಆಗಿಂದಾಗ್ಗೆ ಸಂಭವಿಸುವ ಖಾಲಿಗಳಿಂದ ಇಜಾಫೆಗಳು ಕ್ರಮ ಪಡಿಸಲ್ಪಡುವುದಲ್ಲದೆ ಕೆಳಗಿನ ತರಗತಿಗಳಲ್ಲಿರುವ ಜತೆಗಳ ಪಾತ್ರತ್ತೆಗಳು, ಯೋಗ್ಯತೆಗಳು ಮತ್ತು ಕೆಲಸಗಳು ಇವುಗಳನ್ನು ಸರನೋಡಿ ನಿರ್ಣೈಸಲ್ಪಡುವುವೆ.

(10) ಇಲ್ಲಿ ವಿಧಿಸಲ್ಪಟ್ಟಿರುವಂತೆ ಯೋಗ್ಯತೆಯನ್ನು ಹೊಂದಿದ ಯಾವ ಶೇಕದಾರನು ಹೊಸ ತರಗತಿಗಳಲ್ಲಿ ಯಾವದರ ಸಂಬಳಕ್ಕೂ ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದರೆ ಹಳೆದು ನಿಬಂಧನೆಗಳ ಮೇರೆ ಅವನಿಗೆ ಹಕ್ಕಿರುವ ಸಂಬಳವನ್ನು ಮಾತ್ರ ಹೊಂದತಕ್ಕದ್ದು.

(11) ಶೇಕದಾರರು ಈ ಕೆಳಗಿನ ಕೆಲಸಗಳನ್ನು ಮಾಡತಕ್ಕದ್ದು :—

(ಎ) ಅದಕ್ಕಾಗಿ ಪ್ರತ್ಯೇಕವಾದ ಶಿಬ್ಬಂದಿ ಇಲ್ಲದೆ ಇರುವಾಗ ಸಾಯರು ವಸೂಲಿ, ಮತ್ತು ಸಾಯರ್ ಕಾರ್ಕೂನಗಳನ್ನು ಇಟ್ಟು ಇರುವಾಗ ಅವರ ಕೆಲಸದ ಮೇಲ್ವಿಚಾರಣೆ.

(ಬಿ) ರವಿನ್ಯೂ ವಸೂಲಿಯು ಮತ್ತು ಆ ಸಂಬಂಧದಲ್ಲಿ ಗ್ರಾಮ ನೌಕರರ ಕೆಲಸದ ಮೇಲ್ವಿಚಾರಣೆ.

(ಸಿ) ತಗಾದೆ ನೋಟಿಸ್‌ಗಳನ್ನು ತಯಾರ್ಮಾಡುವುದು, ರವಾನಿಸುವುದು, ಮತ್ತು ಜಾರಿ ಮಾಡುವುದು ಇವುಗಳ ಮೇಲ್ವಿಚಾರಣೆ.

(ಡಿ) ಅಮಲ್ದಾರ್ರ ಹುಕುಂ ಮೇರೆ ಬಾಕಿದಾರರ ಸ್ವತ್ತನ್ನು ಜಪ್ತಿ ಮಾಡುವುದು.

(ಇ) ಜಾರಿಯಲ್ಲಿರುವ ನಿಬಂಧನೆಗಳ ನಿಯಮಗಳ ಮೇರೆ ಸ್ವತ್ತಿನ ಹರಾಜುಗಳನ್ನು ನಡಸುವುದು.

(ಎಫ್) ಲ್ಯಾಂಡ್ ರವಿನ್ಯೂ ಕೋಡಿನ 146 ರಿಂದ 151ರ ವರಗಿನ ಪ್ರಕರಣಗಳ ಮೇರೆ ಲ್ಯಾಂಡ್ ರವಿನ್ಯೂವನ್ನು ಭದ್ರ ಪಡಿಸುವುದಕ್ಕಾಗಿ ಮುಂದಾಗಿ ಉಪಾಯಗಳನ್ನು ಮಾಡಬೇಕಾಗಿರುವಾಗ ರಿಪೋರ್ಟುಗಳನ್ನು ಕಳುಹಿಸುವುದು.

(ಜಿ) ಶಾನಭೋಗನ ಖಾನೇಷುಮಾರಿ ಖಾತೆ, ಜೆರಿಬಿ ಲೆಕ್ಕಗಳನ್ನು ಆಗಾಗ್ಗೆ ಪರೀಕ್ಷಿಸಿ ತಾಳೆ ನೋಡುವುದು ಮತ್ತು ಆ ಲೆಕ್ಕಗಳೊಡನೆ ರೈತರು ಕೊಟ್ಟ ಕಂದಾಯಕ್ಕಾಗಿ ಅವರಿಗೆ ಕೊಟ್ಟಿರುವ ರಶೀತಿಗಳನ್ನು ತಾಳೇ ನೋಡುವುದು.

(ಹೆಚ್) ಜನನ ಮರಣದ ಮತ್ತು ದನಗಳ ಮರಣದ ಲೆಕ್ಕಗಳನ್ನು ತೋರಿಸುವ ಪಟೇಲನ ರಿಜಿಸ್ಟರ್‌ಗಳನ್ನು ಆಗಾಗ್ಗೆ ಪರೀಕ್ಷಿಸುವುದು.

(ಐ) ಸಾಗುವಳಿ, ಮನೆ ಕಟ್ಟುವುದು, ವಗೈರೆಗಳ ಬಗ್ಗೆ ಜಮ್ಮಿ ದರಖಾಸ್ತುಗಳ ಮೇಲೆ ರಿಪೋರ್ಟು ಮಾಡುವುದು.

(ಜೆ) ಹುಕುಂ ಮೇರೆ ದರಖಾಸ್ತು ಜಮ್ಮಿಗಳ ಮತ್ತು ಗವರ್ನಮೆಂಟ್ ಚಿಲ್ಲರೆ ರವಿನ್ಯೂ ಬಾಬುಗಳ ಹರಾಜು.

(ಕೆ) ಕಾಲಸ್ಥಿತಿ, ಮಳೆ, ಮತ್ತು ವಿಶೇಷವಾಗಿ ಕ್ಷಾಮ ನಿವಾರಣೆಯ ಕೋಡಿನ 10ನೆಯ ಪ್ರಕರಣಕ್ಕನುಸಾರವಾಗಿ ತನ್ನ ಹೊಬಳಿಯ ಸಾಮಾನ್ಯ ಸ್ಥಿತಿಗೆ ಸಂಬಂಧಪಟ್ಟ ಇತರ ವಿಷಯಗಳೂ ಇವುಗಳ ಮೇಲೆ ರಿಪೋರ್ಟು ಮಾಡುವುದು.

(ಎಲ್) ಸರ್ವೆ ನಂಬರುಗಳನ್ನು ಫೋಡ್ ಮಾಡುವುದು ಮತ್ತು ಫೋಡ್ ನಂಬರುಗಳ ನಕ್ಷೆ ಬರೆಯುವುದು.

(ಎಮ್) ಬಳೆಗಳು ಮತ್ತು ಅವುಗಳ ಉತ್ಪತ್ತಿ, ಎಲ್ಲೆ ಬಾಂದುಗಳ ಸ್ಥಿತಿ ಮತ್ತು ಸರ್ಕಾರದ ನೀರನ್ನು ಬಗರ ಹುಕುಂ ಉಪಯೋಗಿಸುವುದು, ಇವುಗಳನ್ನು ಕುರಿತು ಶಾನುಭೋಗನು ಪಕಣಿಯಲ್ಲಿ ಬರೆದಿರುವುದನ್ನು ಪರೀಕ್ಷಿಸುವುದು, ಪ್ರತಿವರ್ಷದಲ್ಲಿಯೂ ಪ್ರತಿ ಗ್ರಾಮದಲ್ಲಿ ಇರುವ ಸರ್ವೆ ನಂಬರುಗಳಲ್ಲಿ ಶೇಕಡ್ಕಾ 5ರಕ್ಕೆ ಕಡಮೆ ಇಲ್ಲದಂತೆ ಅಜಮಾಯಿಷಿ ಮಾಡುವುದು, ಮತ್ತು ಹಿಡುವಳಿಯಲ್ಲಿಲ್ಲದ ಸರ್ವೆ ನಂಬರುಗಳ ಬಾಂದುಗಳಿಗೆ ವಿಶೇಷವಾಗಿ ಅವಧಾನವನ್ನು ಕೊಡುವುದು.

(ಎನ್) ಪ್ರತಿ ಜವಿಾನಿನ (ಫೀಲ್ಡ್) ಸರ್ವೆ ಬಾಂದುಗಳನ್ನು ಕ್ರಮವಾಗಿ ಕಾಪಾಡುವಂತೆ ಬಲಾತ್ಕಾರ ಪಡಿಸುವುದು.

(ಬ) ಗ್ರಾಮನಿರ್ಮಾಲೀಕರಣಕ್ಕೆ ಅವಧಾನವನ್ನು ಕೊಡುವುದು, ಮತ್ತು ಜನರ ದಾರಿಯ ಮೇಲೆ ಬತ್ತಿಕೊಂಡು ಬರದ ಹಾಗೆ ನೋಡಿಕೊಳ್ಳುವುದು.

(ಪಿ) ಸಾಲುಮರಗಳ ಮತ್ತು ತೋಪುಗಳ ರಕ್ಷಣೆ.

(ಕ್ಯೂ) ಕೆರೆಗಳು, ನಾಲೆಗಳು, ಮತ್ತು ಸರ್ಕಾರಿ ಸಂಬಂಧ ಕಟ್ಟಡಗಳು ಇವುಗಳನ್ನು ಹೋಗಿ ನೋಡಿ ಹಾಗೆ ನೋಡಿದ್ದಕ್ಕೆ ರಿಪೋರ್ಟು ಮಾಡುವುದು, ಮತ್ತು ಜರೂರಿನ ಸಂದರ್ಭಗಳಲ್ಲಿ ಆಪತ್ಪ್ರತಿಬಂಧಕಗಾಗಿ ಏರ್ಪಾಡುಗಳನ್ನು ಮಾಡುವುದು.

(ಆರ್) ಕೆರೆಗಳನ್ನು ಕಾಲುವೆಗಳನ್ನು ಕಾಪಾಡುವುದಕ್ಕೆ ಸಾಲಿಯಾನ ಆಗತಕ್ಕ ಕಾಮಗಾರಿ.

(ಎಸ್) ತಕರಾರು ಬರುವ ಸಂದರ್ಭಗಳಲ್ಲಿಯೂ ಮತ್ತು ಅದಕ್ಕಾಗಿ ಪ್ರತ್ಯೇಕವಾದ ಏರ್ಪಾಡು ಇಲ್ಲದೆ ಇರುವಾಗಲೂ ಕೆರೆಗಳಿಂದಲೂ ನಾಲೆಗಳಿಂದಲೂ ಬರುವ ನೀರಿನ ಸರಿಯಾದ ಹಂಚಿಗೆ ವಿಷಯಕ್ಕೆ ಅವಧಾನವನ್ನು ಕೊಡುವುದು.

(ಟಿ) ಡಿಸ್ಟ್ರಿಕ್ಟು ಜಂಗಲುಗಳ ಮತ್ತು ಸಂದಲಿ ಮರಗಳ ರಕ್ಷಣೆ.

(ಯು) ಟಪಾಲು ಎತ್ತುಗಳ ಸರಬರಾಯಿ ಮತ್ತು ಅವಶ್ಯವಿದ್ದಾಗ ಆಫಿಸರುಗಳ ಮತ್ತು ಪ್ರಯಾಣಿಕರ ಅವಶ್ಯಕತೆಗಳಿಗೆ ಅವಧಾನವನ್ನು ಕೊಡುವುದು.

(ವಿ) ಕಡವಿನ ದೋಣಿಗಳು ಮತ್ತು ಹರಿಗೋಲುಗಳು ಭದ್ರವಾದ ಸ್ಥಿತಿಯಲ್ಲಿರುವುದನ್ನು ಕುರಿತು ಅಜಮಾಯಿಷಿ ಮಾಡುವುದು ಮತ್ತು ಕಡವುಗಳ ವಿಷಯದಲ್ಲಿ ವಿಧಿಸಿರುವ ನಿಬಂಧನೆಗಳನ್ನು ಕ್ರಮವಾಗಿ ಆಚರಿಸುವಂತೆ ನೋಡಿಕೊಳ್ಳುವುದು.

(ಡಬ್ಲ್ಯು) ಸೈನ್ಯಗಳಿಗೆ ಸರಬರಾಯಿ.

(ಎಕ್ಸ್) ಗ್ರೇಟ್ ಟ್ರಿಗೋನಾ ಮೆಟ್ರಿಕಲ್ ಸರ್ವೆ ಸ್ಥೇರ್ಷಗಳ ಅಜಮಾಯಿಷಿ.

(ವೈ) ಶಿಡುಬು ಹಾಕುವವರು ಅವರ ಕೆಲಸವನ್ನು ಮಾಡುವುದಕ್ಕೆ ಸಹಾಯ ಮಾಡುವುದು.

(ಜಡ್) ಮುಜರಾಯಿ ಸತ್ರ ದೇವಾಲಯಗಳ ಅಜಮಾಯಿಷಿ ಮತ್ತು.

(ಎಎ) ಮೇಲಿನ ಅಧಿಕಾರಿಗಳು ವಿಧಿಸುವ ಇತರ ಕೆಲಸಗಳು.

(12) ಹಳೆಯ ಏರ್ಪಾಡಿಗೆ ಬದಲಾಗಿ ಈ ಹೊಸ ಏರ್ಪಾಡನ್ನು ಜಾರಿಗೆ ತರುವ ಸಂದರ್ಭದಲ್ಲಿ, ಈಗಿರುವ ಕೇಕದಾರ್ರಿಗೆ ಬದಲಾಗಿ ಬೇರೆ ಜನಗಳನ್ನು ಕಾಲಕ್ರಮೇಣ ಇಡತಕ್ಕದ್ದು, ಮತ್ತು ಈ ನಿಬಂಧನೆಗಳ ಪ್ರಕಾರ ಯೋಗ್ಯತೆಯನ್ನು ಹೊಂದಿದ ಜನಗಳನ್ನು ಖಾಲಿ ಬಿದ್ದಹಾಗೆಲ್ಲಾ ನೇಮಿಸತಕ್ಕದ್ದು.

ತಾರೀಖು 10ನೆ ಆಗಸ್ಟ್ 1904.

ನಂ. 352—(38—04-5)-2—ಜು., ಕೋಲಾರ ಗೋಲ್ಡ್‌ಫೀಲ್ಡ್‌ಗಳ ಅಸಿಸ್ಟೆಂಟ್ ಕಮಿಷನರ ಮತ್ತು ಮೊದಲನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ॥ ಪಿ. ಎಫ್. ಬೌರಿಂಗ್ ಯವರಿಗೆ ಪ್ಲೇಟುಗಾಗಿ ದರ್ಯಾಫ್ತ್ ಮಾಡಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ತಾರೀಖು 10—11ನೆ ಆಗಸ್ಟ್ 1904.

ನಂ. 1199—43-4,—ಎಜ್ಯು., ಸ್ ಈ 1902ನೆ ಫೆಬ್ರವರಿ 10ನೆ ಮಾರ್ಕ್ಯಂ 13156—ಎಜ್ಯು. 266ನೆ ನಂಬರ್ ಗವರ್ನ್‌ಮೆಂಟಿನ ಇಸ್ತಿಹಾರ್ನ್‌ಮೆಯಲ್ಲಿ ಘಾಯಿಷಾದ ಪರಿಷ್ಕರಿಸಲ್ಪಟ್ಟ ರೂಲುಗಳನುಸರಿಸಿ ಇದರಲ್ಲೀ ಕಂಡ ದೊಡ್ಡಮನುಷ್ಯರುಗಳುಳ್ಳ ಕಮಿಟಿಯು ಚಿತ್ರದುರ್ಗದಲ್ಲಿರುವ ಗವರ್ನ್‌ಮೆಂಟ್ ಹಿಂದುಸ್ತಾನಿ ಬಾಲಿಕಾ ಪಾಠಶಾಲೆಯ ಆಡಳಿತಕ್ಕೋಸ್ಕರ ಮೊಕರರ್ರಾಡಲ್ಪಟ್ಟಿರುತ್ತೆ :—

ಪ್ರೆಸಿಡೆಂಟರು.

ಮೆ॥ ಎಸ್. ವರದರಾಜಯ್ಯಂಗಾರ್ರು, ಸಬ್ ಜಡ್ಜೀರರು.

ಮೆಂಬರುಗಳು.

1. ಮೆ॥ ಜಹೀರ್-ಡ್ಡೀನ್ ಮೆಕ್ಕೈಯವರು, ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರು.
2. ಚಿತ್ರದುರ್ಗ ಡಿಸ್ಟ್ರಿಕ್ಟಿನ ಸ್ಕೂಲುಗಳ ಡೆಪ್ಯೂಟಿ ಇನ್‌ಸ್ಪೆಕ್ಟರು, ಎಕ್ಸ್ ಅಫೀಷಿಯೋ.
3. ಹೈಸ್ಕೂಲಿನ ಹಿಂದುಸ್ತಾನಿ ಮುಖ್ಯೋಪಾಧ್ಯಾಯರು, ಎಕ್ಸ್ ಅಫೀಷಿಯೋ.
4. ವ್ಯಾಕ್ಸಿನೇಷನಿನ ಡೆಪ್ಯೂಟಿ ಇನ್‌ಸ್ಪೆಕ್ಟರು, ಎಕ್ಸ್ ಅಫೀಷಿಯೋ.
5. ಮೆ॥ ಖಾಜಿ ಸೈಯದ್ ನೊಹರ್ದೀನ್ ಹುಸೇನ್‌ರವರು, ಟರ್ಕ್ ಖಾಜಿ ಮತ್ತು ಡಿಸ್ಟ್ರಿಕ್ಟು ಬೋರ್ಡಿನ ಮೆಂಬರು.
6. ,, ನಾಜೆರ್ ದಸ್ತಗಿರಿಸಾಹೇಬರು, ಮ್ಯುನಿಸಿಪಲ್ ಕಮಿಷನರು.
7. ,, ಮಾಣಿಯೂರು ಕರೀಂಸಾಹೇಬರು, ವರ್ತಕರು.
8. ,, ಅಪರಾಫ್ ಷಾ ಸಾಹೇಬರು, ಜಹಗೀರ್‌ದಾರ್ರು, ಸಜ್ಜಕೆರೆ.
9. ,, ಸೈಯದ್ ಹರ್ಸ್ ಸಾಹೇಬರು, ಮರ್ಚಂಟರು.
10. ,, ಅಬ್ದುಲ್ ರಹಮಾನ್ ಸಾಹೇಬರು, ಡಿಸ್ಟ್ರಿಕ್ಟು ಆಫೀಸಿನ ಡೆಪ್ಯೂಟಿ ಕ್ಲಾರ್ಕ್ಟ್.
11. ,, ಚಿತ್ರದುರ್ಗ ಹಿಂದುಸ್ತಾನಿ ಸ್ಕೂಲಿನ ಹೆಡ್ ಮಾಸ್ಟರು, ಎಕ್ಸ್ ಅಫೀಷಿಯೋ.

ತಾರೀಖು 11—12ನೆ ಆಗಸ್ಟ್ 1904.

ನಂ. 1263—ಲೋ. ಫಂ. 17–96, ಸೆಂಟ್ರಲ್ ಕಾಲೇಜಿನಲ್ಲಿನ ಫಾರಸಿ ಮರ್ಯಾದಿಯವರಾದ ಮೌ॥ ಖಾದರಿಮೊಹದೀ ಮೆಕ್ಕೈಯವರು, ವೃತಪಟ್ಟ ಮೌ॥ ಮಹಮ್ಮದ್ ಇಬ್ರಾಹಿಂ ಸಾಹೇಬರ ಸ್ಥಳದಲ್ಲಿ ಬಂಗಳೂರ ಷಹರ್ ಬಸವನಗುಡಿ ಡಿವಿಜನಿನ ಮ್ಯುನಿಸಿಪಲ್ ಕಮ್ಮಿಷನರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

2. ಅಡ್ವೊಕೇಟ್ ಮೌ॥ ಸಿ. ಕೃಷ್ಣಮೂರ್ತಿಯವರು ಹಾಲಿ ಖಾಲಿ ಇರುವ ಉದ್ಯೋಗದ ಭರ್ತಿಗೆಯ್ಗೆ ಮ್ಯುನಿಸಿಪಲ್ ಕಮ್ಮಿಷನರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 12—13ನೆ ಆಗಸ್ಟ್ 1904.

ನಂ. 1299 – 27–2 – ಮೆಡಿ., ಕೋಲಾರ್ ಭಂಗಾರ ಗಣಿಗಳ ಸಿವಿಲ್ ಸರ್ಜ್ಜನರಾದ ಮೌ॥ ಇ. ಎಸ್. ಕೃಷ್ಣಸ್ವಾಮಿ ಅಯ್ಯರ್ ಯವರಿಗೆ, 1904ನೆ ಏಪ್ರಿಲ್ 25ನೆ ಮಾರ್ಕ್ಕಂ ಜ. 5373ನೆ ನಂಬರ್ ಗವರ್ನಮೆಂಟ್. ಆಜ್ಞಾಪತ್ರಾನುಮೆಯಲ್ಲಿ ಕೊಟ್ಟಿದ್ದ ಎರಡು ತಿಂಗಳು ಮತ್ತು ಇಪ್ಪತ್ತೊಂದು ದಿನಗಳ ಪ್ರಿವಿಲೇಜ್ ರಜಾವನ್ನು, ಅವರು 1904ನೆ ಮೇ 17ನೆ ತಾರೀಖಿನ ಮಧ್ಯಾಹ್ನದ ಲಾಗಾಯತು ಉಪಯೋಗಿಸಿಕೊಂಡು, 1904ನೆ ಜುಲೈ 11ನೆ ತಾರೀಖಿನ ಮಧ್ಯಾಹ್ನತ್ತರ ಸೀನಿಯರ್ ಸರ್ಜ್ಜನರವರ ಹುಕುಂ ಅನುಸರಿಸಿ ತಮ್ಮ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 15—16ನೆ ಆಗಸ್ಟ್ 1904.

ನಂ. 1368—56–2—ಲೋ. ಬೋ., ಸ॥ 1902ನೆ ಇಸವಿಯ 11ನೆ ನಂ. ಲೋಕಲ್ ಬೋರ್ಡುಗಳ ರಗ್ಯುಲೇಷನ್ ಅನುಸರಿಸಿ ಮಾಡಲ್ಪಟ್ಟ ರೂಲುಗಳ 5ನೆ ಪ್ಯಾರಾ (ಇ) ಕ್ಲಾಜಿನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರ ಶ್ರೀಮನ್ ಮಹಾರಾಜಾ ಸರ್ಕಾರದವರು ಮೊಳಕಾಲ್ಮುರು ತಾಲ್ಲೂಕು ಬೋರ್ಡಿನ ಮೆಂಬರಾದ ಮೌ॥ ನೇರಲಹಳ್ಳಿ ಸಣ್ಣಪ್ಪನವರನ್ನು, ವೃತಪಟ್ಟ ಮೌ॥ ಆದವಾನಿ ನರಸಿಂಗಪ್ಪನವರಿಗೆ ಬದಲಾಗಿ, ಚಿತ್ರದುರ್ಗ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರನ್ನಾಗಿ ಮೊಕರರ್ರಾಡಿಸುತ್ತಾರೆ.

ತಾರೀಖು 16ನೆ ಆಗಸ್ಟ್ 1904.

ನಂ. ಜು. 415—ಸಿ. 45—3, ಸ॥ 1901ನೆ ಇಸವಿಯ VIIನೆ ನಂಬರ್ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನಿನ 22ನೆ ಸೆಕ್ಷನ್‌ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರ ಶ್ರೀಮನ್ ಮಹಾರಾಜಾ ಸರ್ಕಾರದವರು ನಂಜನಗೂಡು, ಶ್ರೀರಂಗಪಟ್ಟಣ, ಹೊಳೇನರಸೀಪುರ ಮತ್ತು ಎಡೆಹಳ್ಳಿ ಮುನ್ಸಿಫರುಗಳಿಗೆ ಅವರವರ ಸ್ಥಳಿಕ ಸರಹದ್ದುಗಳಲ್ಲಿ ಮೇಲ್ಕಂಡ ರೆಗ್ಯುಲೇಷನ್ ಅನುಸರಿಸಿ ಉಂಟಾಗುವ ಮತ್ತು ಮುನ್ಸಿಫರ ಅಧಿಕಾರಕ್ಕೊಳಪಟ್ಟ ಮೊಬಲಗ್ಯೆ ಮೀರದ ನಡವಳಿಕೆಗಳಲ್ಲಿ ಡಿಸ್ಟ್ರಿಕ್ಟು ಕೋರ್ಟಿಗೆ ಉಂಟಾದ ಅಧಿಕಾರಗಳನ್ನು ಕೊಟ್ಟಿರುತ್ತಾರೆ.

ತಾರೀಖು 16ನೆ ಆಗಸ್ಟ್ 1904.

ನಂ. ಜ. 952—103-03, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಕೋಲಾರ್ ಭಂಗಾರ ಗಣಿಗಳಲ್ಲಿರುವ ರಾಬರ್ಟ್ಸನ್ ಪೇಟೆಯಲ್ಲಿ, ಪೋಸ್ಟ್ ಆಫೀಸ ಟೆಲಿಗ್ರಾಫ್ ಕೂಡಿದ ಮೂರನೇ ಕ್ಲಾಸ್ ಆಫೀಸು 1904ನೆ ಜುಲೈ 30ನೆ ತಾರೀಖಿನಲ್ಲಿ ತೆರ್ದಟ್ಟಿರುತ್ತೆ.

ತಾರೀಖು 16ನೆ ಆಗಸ್ಟ್ 1904.

ನಂ. ಜು. 421—ರಿಜಿ. 6-6, ಇದರಿಂದ ಕಂಡ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳ ಮೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಹೆಸರು.	ಹುದ್ದೆ.	ಕ್ಲಾಸ್.
ಎಸ್. ಕೆ. ಲಿಂಗಣ್ಣಯ್ಯ, ಬಿ. ಎ., ಯವರು	ಎಕ್ಸೈಜ್ ಕಮ್ಮಿಷನರವರ ಆಫೀಸ್ ಅಕೌಂಟೆಂಟ್	ಸಬ್ ಪ್ಲೇಟಂ 6ನೆ ಕ್ಲಾಸ್ ಸಬ್ ರಿಜಿಸ್ಟ್ರಾರಾಗಿರತಕ್ಕದ್ದು
ಜಿ. ರಾಮಾಚಾರ್, ಬಿ. ಎ., ಯವರು ..	ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸು ಅಕೌಂಟೆಂಟ್	ಡಿಟ್ಟೋ
ಸಿ. ವಿ. ಕೃಷ್ಣಮೂರ್ತಿ, ಬಿ. ಎ., ಯವರು	...	ಡಿಟ್ಟೋ

ತಾರೀಖು 17ನೆ ಆಗಸ್ಟ್ 1904.

ನಂ. ಜು. 438—ಪೋಲೀಸ್ 44—2, ಕೋಲಾರ್ ಭಂಗಾರ ಗಣಿಗಳ ಪೋಲೀಸ್ ಸೂಪರ್‌ಟೆಂಡೆಂಟರಾದ ಮೌ॥ ಪಿ. ಬಿ. ಥಾಮಸ್ ಸಾಹೇಬರಿಗೆ 1904ನೆ ಮೇ 7ನೆ ತಾ॥ 24ನೆ ಮಾರ್ಕ್ಕಂ 2341—ಜು. ಮತ್ತು 2513—ಜು. ಫೈ. 11—99—00ನೆ ನಂಬರುಗಳ ಗವರ್ನಮೆಂಟ್ ಆಜ್ಞಾಪತ್ರಾನುಮೆಯಲ್ಲಿ ಕೊಟ್ಟಿದ್ದ ಒಂದು ಜತಿಂಗಳು, ಎರಡು ಹದಿನೈದು ದಿನಗಳ ರಜಾಗಿನ್ನೂ ಒಂದು ತಿಂಗಳ ರಜಾ ಮಾಡಲ್ಪಟ್ಟಿರುತ್ತೆ.

ತಾರೀಖು 16ನೆ ಆಗಸ್ಟ್, 1904.

ನಂ. ಜು. 424—ರಿಜಿ. 6-7, ಇದರಡೀ ಕಂಡ ಸ್ಪೆಷಲ್ ಸಬ್ ರಿಜಿಸ್ಟ್ರಾರ್‌ಗಳಿಗೆ ನೇಮಣೂಕಿಗಳು ಮತ್ತು ವರ್ಗವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

ಹೆಸರು.	ಯಾವ ಸ್ಥಳದಿಂದ.	ಯಾವ ಸ್ಥಳಕ್ಕೆ.	ಪರಾ.
ಎಂ. ನಂಜುಂಡ ಸ್ವಾಮಿಯವರು ...	ಕೃಷ್ಣರಾಜಪೇಟೆಯಿಂದ	ಪಿಕಾರ್ಡಪುರಕ್ಕೆ ...	ಹೊಸದಾಗಿ ನಿರ್ಮಿಸಿದ ಆಫೀಸು
ಟಿ. ಬಿ. ವೆಂಕಟಾಚಾರ್ಯರು ...	ನೆಲಮಂಗಲದಿಂದ	ಕೃಷ್ಣರಾಜಪೇಟೆಗೆ	
ಸಿ. ಸೂರ್ಯನಾರಾಯಣ ಶಾಸ್ತ್ರಿಗಳು	ಪಾಲೂರಿಂದ	ನೆಲಮಂಗಲಕ್ಕೆ	
ಎಚ್. ದ್ವೈಪಾಯನಾಚಾರ್, ಬಿ. ಎ., ಯವರು.	ತುಮಕೂರಿಂದ	ಮಾಲೂರಿಗೆ	
ಎ. ಮಹದೇವ ಮೊದಲಿಯಾರು	ಹಾಸನದಿಂದ	ತುಮಕೂರಿಗೆ	
ಎಸ್ ಕೆ. ಲಿಂಗಣ್ಣಯ್ಯ, ಬಿ. ಎ., ಯವರು.	ಎಕ್ಸೈಜ್ ಕಮ್ಮಿಷನರವರ ಆಫೀಸು ಅಕೌಂಟೆಂಟ್ ಕೆಲಸದಿಂದ	ಸೂರಬಕ್ಕೆ ...	ಡಿಟೋ
ಇ. ಎಸ್. ವೆಂಕಟರಮಣಯ್ಯರ್ ಯವರು	ಮಳವಳ್ಳಿಯಿಂದ	ನಗರಕ್ಕೆ ...	ಡಿಟೋ
ಜೆ. ಶ್ರೀಕಂಠರಾವ್, ಬಿ. ಎ., ಯವರು .	ಸಿಡ್ಲಘಟ್ಟದಿಂದ	ಮಳವಳ್ಳಿಗೆ	
ಎಚ್. ಬಿ. ಕೃಷ್ಣರಾವ್, ಬಿ. ಎ.,ಯವರು	ಚಿತ್ರದುರ್ಗದಿಂದ	ಸಿಡ್ಲಘಟ್ಟಕ್ಕೆ	
ಜಿ. ರಾಮಾಚಾರ್, ಬಿ. ಎ., ಯವರು ...	ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫೀಸ್ ಅಕೌಂಟೆಂಟ್ ಕೆಲಸದಿಂದ	ಚಿತ್ರದುರ್ಗಕ್ಕೆ	
ಎಂ. ಟಿ. ಸಂಪತ್ಕುಮಾರಾಚಾರ್, ಬಿ. ಎ., ಯವರು.	ಚಿಕ್ಕಮಗಳೂರಿಂದ	ಆಲೂರಿಗೆ ...	ಡಿಟೋ
ಸಿ. ವಿ. ಕೃಷ್ಣಮೂರ್ತಿ, ಬಿ. ಎ., ಯವರು.	...	ಚಿಕ್ಕಮಗಳೂರಿಗೆ	

ತಾರೀಖು 17ನೆ ಆಗಸ್ಟ್ 1904.

ನಂ. ಜು. 445—ಪ್ರಿ. 10—5, ಗವರ್ನಮೆಂಟ್ ಪ್ರೆಸ್ ಮತ್ತು ಸ್ಟೇಷನರಿ ಮತ್ತು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಾದ ಮತ್ತು ಮೈಸೂರ ಗೆಜೆಟ್ ಕಂಪೈಲರಾದ ಮೆ|| ಜಿ. ಹ್ಯೂಂ ರೈಟ್ ಸಾಹೇಬರಿಗೆ 1904ನೆ ಆಗಸ್ಟ್ 9ನೆ ಮಲ್ಕುಂ 332-5-10-2-ಜು. ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸಿನಲ್ಲಿ ಕೊಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಇನ್ನೂ ಎಂಟು ದಿನಗಳು ಜಾಸ್ತಿ ಮಾಡಲ್ಪಟ್ಟು, ವಿಸಿಷ್ಟ ರಜಾಕಾಲವು ಮೈಸೂರ ಸರ್ವಿಸ್ ರೆಗ್ಯುಲೇಷ್ಟಗಳ 188ನೆ ಆರ್ಟಿಕಲ್ ಅನುಸರಿಸಿ ಪ್ರಿವಿಲೇಜ್ ರಜಾವಾಗಿ ಎಣಿಸಲ್ಪಡತಕ್ಕದ್ದು.

ಗವರ್ನಮೆಂಟ್ ನೇತ್ರ ವೈದ್ಯರಾದ ಮೆ|| ಎಸ್. ವಿ. ರಾಮಸ್ವಾಮಯ್ಯಂಗಾರ್ರು ಸೆಂಟ್ರಲ್ ಜೈಲ್ ಸೂಪರಿಂಟೆಂಡಂಟರಾಗಿಯೂ ಮತ್ತು ಗವರ್ನಮೆಂಟ್ ಅಸಿಸ್ಟೆಂಟ್ ಸೆಕ್ರಿಟೆರಿಯವರಾದ ಮೆ|| ಎಚ್. ರಾಮಯ್ಯನವರು ಗವರ್ನಮೆಂಟ್ ಪ್ರೆಸ್ ಮತ್ತು ಸ್ಟೇಷನೆರಿ ಸೂಪರಿಂಟೆಂಡೆಂಟರಾಗಿಯೂ ಅವರವರ ಕೆಲಸಗಳೊಂದಿಗೆ ಸದರೀ ಮೆ|| ಹ್ಯೂಂ ರೈಟ್ ಸಾಹೇಬರು ರಜಾದಮೇಲಿರುವ ಕಾಲದಲ್ಲಿ ಯಾವತ್ತೊಂದು ಹುಕುಂ ಕೊಡುವ ಪರಿಯಂತ ಅಕ್ಟಿಂಗ್ ತರೀಕ್ ಕೆಲಸ ನಿರ್ವಹಿಸತಕ್ಕದ್ದು.

ನಂ. ಆರ್. 553—236-6, 1904ನೆಯ ಜುಲೈ ತಾರೀಖು 25.

ಮೈಸೂರಿನ ಘನವಳ್ಳ ರೆಸಿಡೆಂಟರ ಫಸ್ಟ್ ಅಸಿಸ್ಟೆಂಟರಿಂದ ಕೊಡಲ್ಪಟ್ಟ 1904ನೆಯ ಜುಲೈ 14ನೆಯ ತಾರೀಖಿನ ನಂ. 3351 ಮತ್ತು 3352ನೆಯ ಇಸ್ತಿಹಾರ್‌ನಾಮೆಗಳು ಸರ್ವ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿವೆ.

ನಂ. 3351. 1904ನೆಯ ಜುಲೈ ತಾರೀಖು 14.

ಮುಂಜಿ ಬೆಂಗಳೂರು ತಾಲ್ಲೂಕಿನ ಒಂದು ಭಾಗವಾಗಿದ್ದು ಈಗ ಬೆಂಗಳೂರು ಸಿವಿಲ್ ಮತ್ತು ಮಿಲಿಟೆರಿ ಸ್ಟೇಷನ್ ಎಂದು ಕರೆಯಲ್ಪಟ್ಟಿರುವ (ಬ್ರಿಟಿಷ್ ಗವರ್ನಮೆಂಟಿನವರಿಗೆ) ಕೊಟ್ಟಿರುವ ಪ್ರದೇಶಕ್ಕೆ ಈಗ ಸೇರಿರುವ ಜಮೀನ್ ಕಂದಾಯ ದಾಖಲಾಗಿರುವ ಅಥವಾ ದಾಖಲಾಗತಕ್ಕ ಜಮೀನುಗಳ ಮತ್ತು 1865ನೆಯ ನಂ. I ನೆಯ ಖಾನೂನಿನ (ಬೊಂಬಾಯಿ ಸರ್ವೆ ಮತ್ತು ಸೆಟ್ಲ್‌ಮೆಂಟ್ ಖಾನೂನಿನ) XXV ಮತ್ತು XXVI ನೆಯ ಪ್ರಕರಣಗಳ ಮೇರೆ ದಾಖಲಾಗುವ ಅಥವಾ ದಾಖಲಾಗತಕ್ಕ ಕಂದಾಯಗೆಳನ್ನು ಈರಿತು ಮೈಸೂರು ಸಂಸ್ಥಾನಕ್ಕೆ ಲಗಾವಾಗುವಂತೆ ಮಾಡಲ್ಪಟ್ಟಿರುವ ಸದರಿ ಖಾನೂನಿನ XXVIII ನೆಯ ಪ್ರಕರಣ ಮೇರೆ ಕೊಡಲ್ಪಟ್ಟಿರುವ ಸರ್ವೆ ಭರೆವಸೆಯ ಕಾಲವು ಗತಿಸಿರುವುದರಿಂದ, ಮತ್ತು ಅವಶ್ಯವಾಗಿರುವ ಮಟ್ಟಿಗೆ ಹೊಸ ಸರ್ವೆಯನ್ನು, ಮತ್ತು ಜಮೀನುಗಳ ತರಗತಿಯ ನಿರ್ಣಾಟನ್ನು, ಮತ್ತು ಕಂದಾಯದ ಪುನರ್ವಿಮರ್ಶೆಯನ್ನು ಮಾಡತಕ್ಕದ್ದು ಅವಶ್ಯವಾಗಿ ತೋರುವುದರಿಂದ ಇಂಡಿಯಾ ಗವರ್ನಮೆಂಟ್ ಫಾರಿನ್ ಡಿಪಾರ್ಟ್‌ಮೆಂಟ್ 1883ನೆಯ ಇಸವಿಯ ಆಗಸ್ಟ್ 7ನೆಯ ತಾರೀಖಿನ ನಂ. 2252 I ನೆಯ ಇಸ್ತಿಹಾರ್‌ನಾಮೆಯಿಂದ ಮತ್ತು ಆದರ ಪ್ರಕಾರ ಬೆಂಗಳೂರು ಸಿವಿಲ್ ಮತ್ತು ಮಿಲಿಟೆರಿ ಸ್ಟೇಷನಿಗೆ ಲಗಾವು ಮಾಡಲ್ಪಟ್ಟಿರುವ ಸದರಿ ಖಾನೂನಿನ XXX ನೆಯ ಪ್ರಕರಣದಮೇರೆ ಮೈಸೂರು ರೆಸಿಡೆಂಟರವರಿಗೆ ಕೊಡಲಟ್ಟಿರುವ ಅಧಿಕಾರದ ಚಲಾವಣೆಯಲ್ಲಿ ಮೇಲ್ಕಂಡ ಹೊಸ ಸರ್ವೆಯನ್ನು, ತದ್ಗತಿ ನಿರ್ಣಯಿಸುವುದನ್ನು ಮತ್ತು ಕಂದಾಯದ ಪುನರ್ವಿಮರ್ಶೆಯನ್ನು ಮಾಡಬೇಕೆಂದು ಅವರು ಅಪ್ಪಣೆ ದಯಪಾಲಿಸುತ್ತಾರೆ.

ಈ ಕೆಲಸವನ್ನು ಪೂರ್ತಿಮಾಡುವ ತಾರೀಖು ಮುಂದೆ ಕ್ರಮವಾಗಿ ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮಿಷನರಿಂದ ಪ್ರಕಟಿಸಲ್ಪಡುವುದು.

304

1289

ನಂ. 3352. 1904ನೆಯ ಜುಲೈ ತಾರೀಖು 14.

1903ನೆಯ ಆಗಸ್ಟ್ 7ನೆಯ ತಾರೀಖಿನ ಇಂಡಿಯಾ ಗವರ್ನ್‌ಮೆಂಟ್ ಫಾರ್ಮ್ ಡಿಪಾರ್ಟ್‌ಮೆಂಟ್ ನಂ. 2252 I ನೆಯ ಇಸ್ತಿಹಾರ್ನಾಮೆಯ ಅಧಿಕಾರದಿಂದ ಮತ್ತು ಅಧಿಕಾರದಮೇರೆ, ಬೆಂಗಳೂರು ಸಿವಿಲ್ ಮತ್ತು ಮಿಲಿಟೆರಿ ಸ್ಟೇಷನಿಗೆ ಲಗಾವ್ ಮಾಡಲ್ಪಟ್ಟಿರುವ (ಬ್ರೊಂಬಾಯಿ ಸರ್ವೆ ಮತ್ತು ಸೆಟ್ಲ್‌ಮೆಂಟ್ ಖಾನೂನಿನ) 1885ನೆಯ ನಂ. I ನೆಯ ಖಾನೂನಿನ V ನೆಯ ಪ್ರಕರಣದ ಮೇರೆ ಮೈಸೂರು ರೆಸಿಡೆಂಟ್ಟರವರು ಅವರ 1904ನೆಯ ಜುಲ್ಯೆ 14ನೆಯ ತಾರೀಖಿನ 3351ನೆಯ ಇಸ್ತಿಹಾರ್ನಾಮೆಯಲ್ಲಿ ಹುಕುಂ ಮಾಡಿರುವಂತೆ ಬೆಂಗಳೂರು ಸಿವಿಲ್ ಮತ್ತು ಮಿಲಿಟೆರಿ ಸ್ಟೇಷನಿಗೆ ಸೇರಿರುವ ಗ್ರಾಮಗಳಲ್ಲಿ ಅಡಗಿರುವ ಜಮೀನುಗಳ ಹೊಸ ಸರ್ವೆ, ಜಮ್ಮಿ ತರಗತಿ ವಿಂಗಡಿಸುವುದು ಮತ್ತು ಕಂದಾಯದ ಪುನರ್ವಿಮರ್ಶೆಯನ್ನು ಮಾಡುವ ಕೆಲಸಕ್ಕಾಗಿ ಈ ಕೆಳಗಿನ ನೇಮಕಗಳನ್ನು ಮಾಡುವುದಕ್ಕೆ ಅಪ್ಪಣೆ ದಯಪಾಲಿಸುತ್ತಾರೆ. ಮೈಸೂರು ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖೆಯ ಕಮಿಷನರ್ ಕರ್ನಲ್ ಜೆ. ಪಿ. ಗ್ರಾಂಟ್ ಯವರು ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮಿಷನರಾಗಿಯೂ ;

ಮೈಸೂರು ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖೆಯ ಡೆಪ್ಯುಟಿ ಸೂಪರ್‌ಇಂಟೆಂಡೆಂಟ್ ವೆ|| ಡಿ. ಶಾಮರಾಯರು, ಸರ್ವೆ ಡೆಪ್ಯುಟಿ ಸೂಪರ್‌ಟೆಂಡೆಂಟರಾಗಿಯೂ ;

ಮೈಸೂರು ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖೆಯ ಸ್ಪೆಷಲ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ವೆ|| ಕೆ. ರಾಮಸ್ವಾಮೈಯ್ಯಂಗಾರ್ರು, ಸರ್ವೆ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರಾಗಿಯೂ ;

ಮೈಸೂರು ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖೆಯ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ವೆ|| ರಾಜಗೋಪಾಲಾಚಾರ್ಲು ಯವರು, ಸರ್ವೆ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರಾಗಿಯೂ ಇರತಕ್ಕದ್ದು.

ಸದರಿ ಖಾನೂನಿನ VI ನೆಯ ಪ್ರಕರಣದಮೇರೆ ಮೈಸೂರು ರೆಸಿಡೆಂಟ್ಟರವರು ಮೇಲ್ಕಂಡ ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮಿಷನರಿಗೂ ಸರ್ವೆ ಡೆಪ್ಯುಟಿ ಸೂಪರ್‌ಟೆಂಡೆಂಟರಿಗೂ ಮೇಲ್ಕಂಡ ಖಾನೂನಿನಲ್ಲಿ ವಿವರಿಸಿರುವಂತೆ ಒಬ್ಬ ಕಲೆಕ್ಟರ ಎಲ್ಲಾ ಅಧಿಕಾರಗಳನ್ನೂ, ಮತ್ತು ಮೇಲ್ಕಂಡ ಸರ್ವೆ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರಿಗೆ ಒಬ್ಬ ಅಸಿಸ್ಟೆಂಟ್ ಕಲೆಕ್ಟರ ಅಧಿಕಾರಗಳನ್ನೂ, ಮೇಲ್ಕಂಡ ಜಮೀನುಗಳ ಮೇಲ್ಕಂಡ ಹೊಸ ಸರ್ವೆ ಮಾಡುವುದರಲ್ಲಿಯೂ, ತರಗತಿ ವಿಂಗಡಿಸುವುದರಲ್ಲಿಯೂ, ಕಂದಾಯದ ಪುನರ್ವಿಮರ್ಶೆ ಮಾಡುವುದರಲ್ಲಿಯೂ, ಮೇಲ್ಕಂಡ ಬೆಂಗಳೂರು ಸಿವಿಲ್ ಮತ್ತು ಮಿಲಿಟೆರಿ ಸ್ಟೇಷನಿನಲ್ಲಿ ಜಲಾಯಿಸುವ ಬಗ್ಗೆ ಕೊಡಲು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 6ನೆ ಆಗಸ್ಟು 1904.

ನಂ. ರೆ. 1079—117-3, ಸ್ಯ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿಲೆ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಕುಣಿಗಲ್ ತಾಲ್ಲೂಕಿನ ಪಲ್ಲರಾಯನಹಳ್ಳಿಯಲ್ಲಿ ಮನೆಗಳನ್ನು ಕಟ್ಟುವಬಗ್ಗೆ ಬೇಕಾಗಿರುತ್ತದೆ. ಮತ್ತು ತುಮಕೂರ ಡಿಸ್ಟ್ರಿಕ್ಟಿನ ಎರಡನೇ ಜನರಲ್ ಅಸಿಸ್ಟೆಂಟ್ ಕಮಿಷನರಾದ ವೆ|| ಏ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂಬರ್.	ಗ್ರಾಮದ ಹೆಸರು.	ಖಾತೇದಾರರ ಹೆಸರು.	ಸರ್ವೆ ನಂ.		ಆಕಾರ.			ತೆಗೆದುಕೊಳ್ಳಬೇಕಾಗಿರುವ ಜಮೀನು.		ಚಕ್ಕುಬಂದಿ.			
			ನಂಬರ್.	ಹಿಸ್ಸ.	ಎ. ಗು.	ರೂ. ಆ.	ಪೈ.	ಎಕರೆ. ಎ. ಗು.	ಆಕಾರ. ರೂ. ಆ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	ಪಲ್ಲರಾಯನಹಳ್ಳಿ	ಪಟೇಲ ನಂಜೇಗೌಡ	ಖುಷ್ಕಿ 8/1	5 2	3 12	0		1 9	0 13	8 ಸ್ವ. ಭಾಗ. ನಂ. 8ರ ಜೈನ್ ಶೋಡಿ 2ನೆ ಭಾಗ.	ಸ್ವ. ನಂ. 7.	ಸ್ವ. ನಂ. 8ರ ಜೈನ್ ಶೋಡಿ 1ನೆ ಭಾಗ.	ಸ್ವ. ನಂ. 8ರ ಜೈನ್ ಶೋಡಿ 3ನೆ ಭಾಗ.

ತಾರೀಖು 9ನೆ ಆಗಸ್ಟು 1904.

ನಂ. ರೆ. 1100—70-2, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ತಾಲ್ಲೂಕಿನ ಅಮಲ್ದಾರ್ರಾದ ವೆ|| ವಿ. ಪಾರ್ಥಸಾರಥಯ್ಯಂಗಾರ್ರಿಗೆ 1904ನೆ ಜುಲೈ 19ನೆ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಸದರೀ ತಾಲ್ಲೂಕಿಗೆ ಸೇರಿದ ಪ್ರೊಬೇಷನರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ವೆ|| ಬಿ. ನಾರಾಯಣಸ್ವಾಮಯ್ಯಂಗಾರ್, ಬಿ. ಎ., ಬಿ. ಎಲ್., ಯವರು, ವೆ|| ವಿ. ಪಾರ್ಥಸಾರಥಯ್ಯಂಗಾರು) ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಸದರೀ ತಾಲ್ಲೂಕಿನ ಅಮಲ್ದಾರ್ರಾಗಿ ಆಕ್ಟಿಂಗ್ ತರೀಕು ಯೊಕರರ್ಯಾಡಲ್ಪಟ್ಟಿರುತ್ತಾರೆ.

ತಾರೀಖು 8ನೆ ಆಗಸ್ಟ್ 1904.

ನಂ. ರೆ. 1072 – 12ಟ–3, ಸ್ಯ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷ್ನ್ ರಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ತುಮಕೂರು ಡಿಸ್ಟ್ರಿಕ್ಟ್ ಚಿಕ್ಕನಾಯಿಕನಹಳ್ಳಿ ತಾಲ್ಲೂಕಿನಲ್ಲಿರುವ ಮಲಗೆಹಳ್ಳಿ ಗ್ರಾಮವನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತದೆ. ಮತ್ತು ಎರಡನೇ ಜನರಲ್ ಅಸಿಸ್ಟೆಂಟ್ ಕಮೀಷನರಾದ ಮೆ॥ ಪಿ. ಶ್ರೀನಿವಾಸಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ಮ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ತಾಲ್ಲೂಕು. ಗ್ರಾಮದ ಹೆಸರು.	ಖಾತೇದಾರರ ಹೆಸರು.	ಜಮೀನಿನ ವಿವರ. ವಿಸ್ತೀರ್ಣ.		ಬೇಕಾಗಿರುವ ವಿಸ್ತೀರ್ಣ. ವಿಸ್ತೀರ್ಣ.		ಹಕ್ಕ್ಬುಬಂದಿ. ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
		ಆಕಾರ.		ಆಕಾರ.					
		ನಂ.	ಎ. ಗು. ರೂ. ಆ. ಪೈ.	ಎ. ಗು. ರೂ. ಆ. ಪೈ.					
ತುಮಕೂರು ಚಿಕ್ಕನಾಯಿಕನಹಳ್ಳಿ ಮಲಗೆಹಳ್ಳಿ	ದೊಡ್ಡಿಗಾಡ ಬೀ ಬೋರೆಗೌಡ	6/2	3 29 3 0 0	3 29 3 0 0	ನಮಲೆ ಗ್ರಾಮಕ್ಕೆ ಹೋಗುವ ಪಾದಿ	ಹುಲಿಯಾರ ರಸ್ತೆ ಮತ್ತು ಸರ್ವೆ ನಂ. 61	ಸರ್ವೆ ನಂ. 6	ಪಾದಿ ಇರುವ ಮಲಗೆಹಳ್ಳಿಯ ಗ್ರಾಮನಿವೇಷನ

ತಾರೀಖು 8ನೆ ಆಗಸ್ಟ್ 1904.

ನಂ. ರೆ. 1077 – 101 – 3, ಸ್ಯ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷ್ನ್ ರಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಕುರುಬರಹಳ್ಳಿ ಗ್ರಾಮದಲ್ಲಿ ಸ್ಮಶಾನಭೂಮಿಗೋಸ್ಕರ ಬೇಕಾಗಿರುತ್ತದೆ. ಮತ್ತು ತುಮಕೂರ ಡಿಸ್ಟ್ರಿಕ್ಟ್‌ನ ಎರಡನೇ ಜನರಲ್ ಅಸಿಸ್ಟೆಂಟ್ ಕಮೀಷನರಾದ ಮೆ॥ ಪಿ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ಮ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಪಲ್ಪಟ್ಟಿರುತ್ತಾರೆ:—

ಗ್ರಾಮದ ಹೆಸರು.	ಖಾತೇದಾರರ ಹೆಸರು.	ಸರ್ವೆ ನಂ. ನಂ.	ವಿವರ.	ಆಕಾರ.	ತೆಗದುಕೊಳ್ಳಬೇಕಾಗಿರುವ ಜಮೀನು. ಎಕರೆ.	ಆಕಾರ.	ಹಕ್ಕ್ಬುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು. ರೂ. ಆ. ಪೈ.		ಎ. ಗು.	ರೂ. ಆ. ಪೈ.				
ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕುರುಬರಹಳ್ಳಿಯ ಗ್ರಾಮ.	ಲಿಂಗೆಂಣ ಬೀ ನಿರ್ವಾಣಿ.	14/1	2 35	3—0—0	0 36	1 0 0	ಎನ್. ನಂ. 14 ಫೋಡಿ ನಿರ್ವಾಣಿಯ ಜಮೀನ್	ಸರ್ವೆನಂಬ್ರನ ಜಮೀನಿನ ಎನ್. ನಂ. 14.	ಸರ್ವೆನಂಬ್ರನ ಜಮೀನಿನ ಎನ್. ನಂ. 13.	ಬೋಡಿ ನಂಬ್ರನ ಜಮೀನಿನ ಎನ್. ನಂ 14.

1291

ತಾರೀಖು 9ನೆ ಆಗಸ್ಟ್ 1904.

ನಂ. ರೆ. 1103—60-2, ಮೈಸೂರ ಸರ್ವಿಸ್ ರೆಗ್ಯುಲೇಷ್ಯನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಚಿಕ್ಕಬಳ್ಳಾಪುರದ ತಾಲ್ಲೂಕಿನ ಅಮಲ್ದಾರ್‌ರಾದ ಮೆ॥ ಎಂ. ಕೃಷ್ಣಸ್ವಾಮಯ್ಯಂಗಾರ್‌ಗೆ 1904ನೆ ಜುಲೈ 10ನೆ ತಾರೀಖಿನ ಲಾಗಾಯತು ಯಾ ಆವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಚಿಕ್ಕಬಳ್ಳಾಪುರ ತಾಲ್ಲೂಕಿನ ಷಿರಿಸ್ತೆದಾರ್‌ರಾದ ವಿ. ಸುಬ್ಬರಾಯರು, ಮೆ॥ ಕೃಷ್ಣಸ್ವಾಮಯ್ಯಂಗಾರ್‌ರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಸದರೀ ತಾಲ್ಲೂಕಿನ ಅಮಲ್ದಾರ್ ಪ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ತಾರೀಖು 10ನೆ ಆಗಸ್ಟ್ 1904.

ನಂ. ಫೈ. 821—42-04, ಕಂಟ್ರೋಲರ್‌ರವರ ಆಫೀಸಿನ ಎಕ್ಸಾಮಿನರಾದ ಮೆ॥ ಜಾರ್ಜ್‌ವೋಟರ್ಸ್ ಯವರು, ಮೆ॥ ಟಿ. ವೈ ಯ್ಯಾಪುರಿ ಜೆಟ್ಟಿಯವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕಂಟ್ರೋಲರವರ ಚೀಫ್ ಅಸಿಸ್ಟೆಂಟರಾಗಿ ಆಕ್ಟಿಂಗ್ ತರೀಕು ನೊಕರರ್ತ್ಮಾಡಲ್ಪಟ್ಟಿರುತ್ತಾರೆ.

ತಾರೀಖು 10ನೆ ಆಗಸ್ಟ್ 1904.

ನಂ. ರೆ. 1109—145-2, ಸ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷ್ಯನ್ ರೆಗ್ಯುಲೇಷನಿನ 6ನೆ ಸೆಕ್ಷ್ಯನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಚೆನ್ನಗಿರಿ ತಾಲ್ಲೂಕಿನಲ್ಲಿರುವ ಸೂಳಿಕೆರೆಯ ಸಿದ್ದನ ಕಾಲಿವೆಯನ್ನು ಅಭಿವೃದ್ಧಿಪಡಿಸುವ ಬಗ್ಯೆ ಬೇಕಾಗಿರುತ್ತದೆ. ಮತ್ತು ಹೊನ್ನಾಳಿ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷ್ಯನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಿಪ್ಪಸಮುದ್ರ.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು.	ಜಮೀನಿನ ವಿವರ.			ಚಕ್ಕುಬಂದಿ.			
					ಸರ್ವೆ ನಂ.	ವಿಸ್ತೀರ್ಣ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎಕರೆ.	ಗುಂಟೆ.				
ಚಿತ್ರದುರ್ಗ	ಚೆನ್ನಗಿರಿ	ನಲ್ಲೂರು	ಬಿಸಲೆ	ಮೆ॥ ಕೆ. ಶಾಮಯ್ಯಂಗಾರು).	6 ಇನಾಂ	2	14	ಸರ್ವೆ ನಂ. 8	ಸರ್ವೆ ನಂ. 42	ಸರ್ವೆ ನಂ. 7	ಸರ್ವೆ ನಂ. 5

ತಾರೀಖು 11ನೆ ಆಗಸ್ಟ್ 1904.

ನಂ. ರೆ. 1234—132-3, ಸ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷ್ಯನ್ ರೆಗ್ಯುಲೇಷನಿನ 6ನೆ ಸೆಕ್ಷ್ಯನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಯಲದೂರು ಅಮಾನಿ ಕೆರೆಗೆ ನೀರು ಬರುವ ಕಾಲಿವೆಯನ್ನು ತೆಗೆದುವ ಬಗ್ಯೆ ಬೇಕಾಗಿರುತ್ತೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನುಗಳನುಸರಿಸಿ ಶ್ರೀನಿವಾಸಪುರ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರವರು ಸದರೀ ಜಮೀನನ್ನು ಕೊಂಡುವ ಬಗ್ಯೆ ಹುಕುಂ ಪಡೆಯಲು ಅಪ್ಪಣೆ ಕೊಡಲ್ಪಟ್ಟಿರುತ್ತಾರೆ :—

ತಿಪ್ಪಸಮುದ್ರ.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರನ ಹೆಸರು.	ನಂ.	ಒಟ್ಟು ವಿಸ್ತೀರ್ಣ.		ಪೇರೀಜು.			ಬೇಕಾಗಿರುವ ಜಮೀನಿನ ವಿಸ್ತೀರ್ಣ.		ಚಕ್ಕುಬಂದಿ.			
													ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ.	ಗು.	ರೂ.	ಆ.	ಪೈ.	ಎ.	ಗು.				
ಕೋಲಾರ	ಶ್ರೀನಿವಾಸಪುರ	ಯಲದೂರು	ಚಿಂತಪಲ್ಲಿಕಾಲದಲ್ಲಿ	ಖಾದರ್‌ಸಾಹೇಬ	8/4	2	12	4	0	0	0	3	ಸರ್ವೆ ನಂ. 8/5	ಸರ್ವೆ ನಂ. 8/2	ಸರ್ವೆ ನಂ. 8/5	ಸರ್ವೆ ನಂ. 8/3

307

ತಾರೀಖು 12ನೆ ಆಗಸ್ಟು 1904.

ನಂ. ರೆ. 1235 - 356-2, ಸ್ ೧೯೦೪ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷ್ನ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಲ್ಲೇ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರ ಪೇಟೆ ಎಗ್ಸ್ಟ್ರಾ ಕ್ಯೂಟೀವ್ ಇಂಜಿನಿಯರವರ ಆಫೀಸ್ ಕಾಂಪೌಂಡಿನ ಪಕ್ಕದಲ್ಲಿ ಬೀದಿ ಕೋಡಿಯನ್ನು ಕಟ್ಟುವ ಬಗ್ಗಾಗಿ ಬೇಕಾಗಿರುತ್ತೆ. ಮತ್ತು ಪೀಲ್ಡ್ ಆಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟ್ ಜೆಪ್ಯುಟಿ ಕಮ್ಮಿಷನರವರು ಸದರೀ ಜಮೀನನ್ನು ಕೊಂಡುವ ಬ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ತಿನ್ಸ್ಟ್ರಿಕ್ಟ್ ತಾಲ್ಲೂಕು. ಹೋಬಳಿ. ಗ್ರಾಮ.	ಹಿಡುವಳಿದಾರ್ರ ಹೆಸರು.	ಬೇಕಾಗಿರುವ ಜಮೀನಿನ ತಪಶೀಲು. ಸರ್ವೆ ನಂ.	ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ	ದಕ್ಷಿಣ	ಷರಾ.
ಬೆಂಗಳೂರು ಬೆಂಗಳೂರು ಕಸಬಾ ಪಟಾಂಡಹಳ್ಳಿ	ಮುನ್ನಾರಪೆಟ್ಟ (ಕೋಮಟಿ)	114	ಎ. ಗು. 1—7	ಸರ್ವೆ ನಂ. 114ರ ಮಿಕ್ಕ ಭಾಗ	ಎಗ್ಸ್ಟ್ರಾ ಕ್ಯೂಟೀವ್ ಇಂಜಿನಿಯರವರ ಆಫೀಸ್	ಸೆಷನ್ ಕಾಂಪೌಂಡಿನ ಅರಸು ಬಹದೂರರವರ ಬಂಗಲೆ.	ಎಗ್ಸ್ಟ್ರಾ ಕ್ಯೂಟೀವ್ ಇಂಜಿನಿಯರವರ ಆಫೀಸ್.	ಈ ಜಮೀನಿನಲ್ಲಿ 47 ಮಾವಿನ ಮರಗಳೂ ಮತ್ತು 3 ಸಂದಲ್ ಮರಗಳೂ ಇರುತ್ತವೆ. ಆಗವಡು ಮೊಬಲಗು ಮರಮ್ಮತ್ ಫಂಡಿನಿಂದ ಕೊಡಲ್ಪಡತಕ್ಕದ್ದು.

ತಾರೀಖು 13ನೆ ಆಗಸ್ಟು 1904.

ನಂ. ರೆ. 1248-57-2, ಚಿಕ್ಕನಾಯಕನಹಳ್ಳಿ ಅಮಲ್ದಾರ್ರಾದ ಮೆ॥ ಪಿ. ವಿಶ್ವನಾಥರಾಯರಿಗೆ, 1904ನೆ ಏಪ್ರೆಲ್ 22ನೆ ಮರ್ಕಂ ರೆ. 3167-ರೆ. ಫೈ. 25—1901-2ನೆ ನಂಬರೊಡನೆ ಆಯ್ಕೆರಾಗುವ ಇಸ್ಟ್ಹಾರ್ನ್ನಾವೆಗಳಲ್ಲಿ ಕೊಟ್ಟಿದ್ದ ಎರಡು ತಿಂಗಳು ಮತ್ತು ಹದಿನೈದು ದಿನಗಳ ಪ್ರಿವಿಲೇಜ್ ರಜಾವನ್ನು ಅವರು 1904ನೆ ಮಾರ್ಚಿ 19ನೆ ತಾರೀಖಿನ ಲಾಗಾಯತು ಜೂನ್ ಮೊದಲನೇ ತಾರೀಖಿನ ವರಿಗೆ ಉಪಯೋಗಿಸಿಕೊಂಡಿರುವದರಿಂದ, ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 13ನೆ ಆಗಸ್ಟು 1904.

ನಂ. ರೆ 1282—113-61, ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಾದ ಮೆ॥ ಎಂ. ನಾರಾಯಣರಾಯರಿಗೆ 1904ನೆ ಇಸವಿ ಮಾರ್ಚ 12ನೆ ಮರ್ಕುಂ ರೆ. 298ನೆ ನಂಬರ್ ಇಸ್ಟ್ಹಾರ್ನ್ನಾವೆಯಲ್ಲಿ ಕೊಟ್ಟಿದ್ದ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 15ನೆ ಆಗಸ್ಟು 1904.

ನಂ. ರೆ. 1305—159-5, ಸ್ ೧೮೯೪ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷ್ನ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಲ್ಲೇ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ನಂಜಿನಗೂಡು ತಾಲ್ಲೂಕು ದೊಡ್ಡ ಕೊಲಾಂಡಿ ಗ್ರಾಮದ ಗಂಕಾಣವನ್ನು ಬಡಾಯಿಸುವ ಬಗ್ಯೆ ಬೇಕಾಗಿರುತ್ತೆ. ಮತ್ತು ಮೀಲ್ಡಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತೆ:—

ತಾಲ್ಲೂಕು. ಹೋಬಳಿ. ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂ.	ತಪಶೀಲು. ವಿಸ್ತೀರ್ಣ.	ಬೇರೀಜು.	ತಗದುಕೊಳ್ಳಬೇಕಾದ ಜಮೀನಿನ ಭಾಗ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ನಂಜನಗೂಡು ಹದಿನಾಲ್ಕು ಬಾಚಳ್ಳಿ ಕೊಲಾಂಡಿ	ಪೂಗ ಗಂಕ ಕ.ಳ ಪ.ಪ್ಪ ಪ.ಸಣ	47	ಎ. ಗು. 3—26	ರೂ. ಆ. 3—8	ಎ. ಗು. 3—26	ಸರ್ವೆ ನಂ. 49 ಮತ್ತು ಹಳ್ಳಿ ರಸ್ತೆ.	ಸರ್ವೆ ನಂ. 46	ಸರ್ವೆ ನಂ. 48	ಸರ್ವೆ ನಂ. 83

1293

ತಾರೀಖು 15ನೆ ಆಗಸ್ಟ್ಟು 1904.

ನಂ. ರೆ. 1316—41—2, ಮೈಸೂರ ಸರ್ವಿಸ್ ರೆಗ್ಯುಲೇಷ್ಯನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಫಾರೆಸ್ಟ್ಟಗಳ ಅಸಿಸ್ಟೆಂಟ್ ಕನ್‌ಸರ್‌ವೇಟರಾದ ಮೆ॥ ಬಿ. ರಾಮಸ್ವಾಮಿ ಅಯ್ಯರ್, ಬಿ. ಎ., ಇವರಿಗೆ 1904ನೆ ಆಗಸ್ಟ್ಟು 15ನೆ ತಾರೀಖಿನಾರಭ್ಯ ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನ ಲಾಗಾಯತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬವೋಜೀಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ಪ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್‌ನ್ನು ಮಾ.

ತಾರೀಖು 16ನೆ ಆಗಸ್ಟ್ಟು 1904.

ನಂ. 900—4828, ಇದರಡಿ ಕಂಡ ಬಡ್ತಿಗಳು ಮೈಸೂರ ಪಬ್ಲಿಕ್ ವರ್ಕ್ಸ್ ಇಲಾಖಾ ಲೋಕಲ್ ಅಪ್ಪರ್ ಸಬಾರ್ಡಿನೇಟ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ 1904ನೆ ಮೇ 6ನೆ ತಾರೀಖಿನ ಲಾಗಾಯತು ಮಾಡಲ್ಪಟ್ಟಿರುತ್ತವೆ :—

ನಂ.	ಡಿವಿಜ್ಞಗಳು.	ಹೆಸರು.	ಹಾಲಿ ಕ್ಲಾಸ್.	ಬಡ್ತಿ ಮಾಡಲ್ಪಟ್ಟ ದರ್ಜೆ.	ಬಡ್ತಿಸ್ವ ಭಾವ.	ಷರಾ.
1	ಕೋಲಾರ.	*ಮೆ॥ ಸಿ. ಸೂರ್ಯನಾರಾಯಣರಾವ್.	2ನೆ ಕ್ಲಾಸ್ ಸೂಪರ್‌ವೈಜರ್ ಕಾಯಂ ಮತ್ತು 1ನೆ ಕ್ಲಾಸ್ ಹಂಗಾಮಿ.	1ನೆ ಕ್ಲಾಸ್ ಸೂಪರ್ ವೈಜರ್.	ಕಾಯಂ	*ಪೆರ್ಷ ಮೇಲೆ ಕೆಲಸದಿಂದ ನಿವೃತ್ತರಾದ 1ನೆ ಕ್ಲಾಸ್ ಸೂಪರ್ ವೈಜರ್ ಮೆ॥ ಎ. ಮುನಿಸಾಮಿ ವೊದಲಿಯಾರ್‌ಗೆ ಬದಲಾಗಿ
2	ತುಮಕೂರು	,, ಬಿ. ವಸಂತಪ್ಪ	3ನೆ ಕ್ಲಾಸ್ ಸೂಪರ್‌ವೈಜರ್ ಕಾಯಂ ಮತ್ತು 2ನೆ ಕ್ಲಾಸ್ ಹಂಗಾಮಿ.	2ನೆ ಕ್ಲಾಸ್ ಸೂಪರ್ ವೈಜರ್.	ಡಿಟೋ	
3	ಡಿಟೋ	,, ಬಿ. ಎಸ್. ಶ್ರೀಕಂಠಯ್ಯ	1ನೆ ಕ್ಲಾಸ್ ಓವರ್ಸಿಯರ್ ಕಾಯಂ ಮತ್ತು 3ನೆ ಕ್ಲಾಸ್ ಸೂಪರ್‌ವೈಜರ್ ಹಂಗಾಮಿ.	3ನೆ ಕ್ಲಾಸ್ ಸೂಪರ್ ವೈಜರ್.	ಡಿಟೋ	
4	ಕಡೂರು ...	,, ಜಿ. ಟಿ. ಕಿಂಗ್ ..	2ನೆ ಕ್ಲಾಸ್ ಓವರ್ಸಿಯರ್ ಕಾಯಂ ಮತ್ತು 1ನೆ ಕ್ಲಾಸ್ ಹಂಗಾಮಿ.	1ನೆ ಕ್ಲಾಸ್ ಓವರ್‌ಸಿಯರ್.	ಡಿಟೋ	
5	ಹಾಸನ ..	,, ಎಚ್. ಎಸ್. ವೆಂಕಟಾಚಾರ್.	3ನೆ ಕ್ಲಾಸ್ ಓವರ್ಸಿಯರ್ ಕಾಯಂ ಮತ್ತು 2ನೆ ಕ್ಲಾಸ್ ಹಂಗಾಮಿ.	2ನೆ ಕ್ಲಾಸ್ ಓವರ್‌ಸಿಯರ್.	ಡಿಟೋ	
6	ಬೆಂಗಳೂರು	,, ಡಿ. ನಂಜುಂಡಯ್ಯ ..	1ನೆ ಕ್ಲಾಸ್ ಸಬ್ ಓವರ್ಸಿಯರ್ ಕಾಯಂ ಮತ್ತು 3ನೆ ಕ್ಲಾಸ್ ಓವರ್ಸಿಯರ್ ಹಂಗಾಮಿ.	3ನೆ ಕ್ಲಾಸ್ ಓವರ್‌ಸಿಯರ್.	ಡಿಟೋ	ಅವರ ಚಾಲ್ತಿ ತಲಬ್ ಅಂದರೆ, ರೂ. 70ರ ಮೇಲೆ.

ಹುಕುಂ ಬವೋಜೀಬ್,
ಡಬ್ಲ್ಯೂ. ಮೆಕಹರ್ಜೆ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಸೆಕ್ರಿಟರಿ.

ಮಿಲಿಟರಿ.

ಇಸ್ತಿಹಾರ್‌ನಾಮೆ.

ತಾರೀಖು 15ನೆ ಆಗಸ್ಟ್ಟು 1904.

ನಂ. 555—7, ಮೈಸೂರ ಶ್ರೀಮದ್ ಮಹಾರಾಜರವರು ಮೆ॥ ಮಹಮ್ಮದ್ ಹಸರ್ಖಾರವರನ್ನು ಮೈಸೂರ ಪೈದಲ್ ಫೋಜಿನ 3ನೆ ಪಟಾಲಂನಲ್ಲಿ ಜಮೇದಾರನ್ನಾಗಿ ನೊಕರರ್ಮಾಡಿರುತ್ತಾರೆ.

ಹುಕುಂ ಬವೋಜೀಬ್,
ಆರ್. ಜಿ. ಜೋನ್ಸ್,
ಲೆಫ್ಟಿನೆಂಟ್ ಕರ್ನಲ್, ಮಿಲಿಟರಿ ಅಸಿಸ್ಟೆಂಟ್.